ದೆಹಲಿ ಕರ್ನಾಟಕ ಸಂಘದ

# ಅಭಿಮತ

ಮಾರ್ಚ್-2017
ಬೆಲೆ ರೂ. 1



## 'ಬದಲಾವಣೆಗೆ ಧೈರ್ಯದಿಂದ ಮುನ್ನುಗ್ಗಿ'

## ಅಂತರರಾಷ್ಟ್ರೀಯ ಮಹಿಳಾ ದಿನ

ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 27 ಸಂಚಿಕೆ 6
ಮಾರ್ಚ್ 2017, ಬೆಲೆ ರೂ. 1

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ:
9958697823

**ಉಪಾಧ್ಯಕ್ಷರು**
ಆಶಾಲತಾ ಎಂ.:
9891249149
ಎಸ್.ಸಿ. ಹೇಮಲತ:
9971121636

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜ:
9811325440

**ಕೋಶಾಧಿಕಾರಿ**
ಕೆ.ಎಸ್.ಜಿ. ಶೆಟ್ಟಿ
9810232113

**ಜಂಟಿ ಕಾರ್ಯದರ್ಶಿಗಳು**
ಟಿ.ಪಿ. ಬೆಳ್ಳಿಯಪ್ಪ:
9654555795
ಜಮುನಾ ಸಿ. ಮಠದ:
9717146597

**ಸಮಿತಿ ಸದಸ್ಯರು**
ಡಾ. ಎಂ.ಎಸ್. ಶಶಿಕುಮಾರ್:
9811689337
ರಾಧಾಕೃಷ್ಣ:
9818252183
ಪೂಜಾ ಪಿ. ರಾವ್:
9810882498
ವಿ.ವಿ.ಬಿರಾದಾರ:
9873005409
ಸಖಾರಾಮ ಉಪ್ಪೂರು
9958807225
ಸುಮಿತಾ ಮುರಗೋಡ
9873000333
ಶಶಿಕಾಂತ್ ಪಾಟೀಲ್
9650182413
ಬಾಬುರಾಜ್ ಪೂಜಾರಿ
9818807696
ತ್ಯಾಗೇಶ್ ಮೂರ್ತಿ
9868393961

**ವಿಶೇಷ ಆಹ್ವಾನಿತರು**
ಐ. ರಾಮ ಮೋಹನ್ ರಾವ್
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ
ಎನ್.ಎಂ. ಸರೋಜ
ರಾಧಾ ಕೌಜಲಗಿ
ಎಂ. ಶಿವರಾಮ ರೈ
ಪಿ. ರಾಜಣ್ಣ

**ಕಾವಲು ಸಮಿತಿ**
ಪಿ.ಎಸ್. ಶೆಟ್ಟಿ
ನಂದಿನಿ ಮಲ್ಯ
ಈಶ್ವರ ಮಡಿವಾಳ

## ನೇರ ಮಾತು

ಪ್ರತಿ ವರ್ಷ ಮಾರ್ಚ್ ಎಂಟರಂದು ಅಂತರರಾಷ್ಟ್ರೀಯ ಮಹಿಳಾ ದಿನವನ್ನು ಜಗತ್ತಿನಲ್ಲೆಡೆ ಹತ್ತು ಹಲವು ರೀತಿಯಲ್ಲಿ ಆಚರಿಸಲಾಗುತ್ತದೆ. ಈ ಆಚರಣೆಗಳು ಸರಿ ಸುಮಾರು ಒಂದು ಸಂಭ್ರಮ ಅಥವಾ ಒಟ್ಟು ಸೇರುವಿಕೆಯಾಗಿ ದಾಖಲೆಯಾಗುವುದೇ ಹೆಚ್ಚು. ಕನಿಷ್ಠ ಪಕ್ಷ ನಮ್ಮೊಂದಿಗೆ ಇರುವ ನಮ್ಮ ಮಹಿಳಾ ಸಾಧಕರನ್ನಾದರೂ ನಾವು ಈ ಸಂದರ್ಭದಲ್ಲಿ ನೆನಪಿಸಿಕೊಳಬೇಕಾದುದು ನಮ್ಮ ಕರ್ತವ್ಯ. ದೆಹಲಿ ಕರ್ನಾಟಕ ಸಂಘದ ಬಗ್ಗೆ ಹೇಳುವುದಾದರೆ ಡಾ. ಸರೋಜಿನಿ ಮಹಿಷಿಯವರ ಕೊಡುಗೆಯನ್ನು ಎಂದೆಂದಿಗೂ ಮರೆಯಲು ಸಾಧ್ಯವಿಲ್ಲ. ಸಂಘದ ಅಧ್ಯಕ್ಷರಾಗಿ ಒಂದು ಸ್ವಂತ ಜಾಗವನ್ನು ಕೊಡಿಸಿ ಕಟ್ಟಡ (ಹಳೆಯ) ಕಟ್ಟಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಸುಮಾರು ಏಳು ವರ್ಷ ನಿರಂತರವಾಗಿ ಅಭಿಮತದ ಸಂಪಾದಕರಾಗಿ ದುಡಿದು ಸಂಘದ ಮುಖ ಪತ್ರಿಕೆಯನ್ನು ರಾಜ್ಯದ ಇತರ ಕನ್ನಡದ ಶ್ರೇಷ್ಠ ನಿಯತಕಾಲಿಕಗಳ ಸರಿಸಮಾನವಾಗಿಸಿದ ಕೀರ್ತಿ ಶ್ರೀಮತಿ ಉಷಾ ಭರತಾದ್ರಿಯವರಿಗೆ ಸಲ್ಲುತ್ತದೆ. ಮಾತ್ರವಲ್ಲ ಸಂಘದ ಉಪಾಧ್ಯಕ್ಷರಾಗಿ ಮತ್ತು ವಿವಿಧ ಹುದ್ದೆಗಳಲ್ಲಿ ಸಂಘವನ್ನು ಸಾಹಿತ್ಯ–ಸಾಂಸ್ಕೃತಿಕವಾಗಿ ಬೆಳೆಸಲು ಅವರು ನೀಡಿದ ಕೊಡುಗೆ ಅನನ್ಯ. ಡಾ. ಅಹಲ್ಯಾ ಚಿಂತಾಮಣಿಯವರು ಸಂಘದ ಉಪಾಧ್ಯಕ್ಷೆಯಾಗಿ, ಅಭಿಮತದ ಸಂಪಾದಕ ಮಂಡಳಿಯಲ್ಲಿ ಮತ್ತು ವಿವಿಧ ಮಜಲುಗಳಲ್ಲಿ ಅವರು ನೀಡಿದ ಮಾರ್ಗದರ್ಶನವನ್ನು ನಾವು ನೆನಪಿಸಿಕೊಳ್ಳಬೇಕು. ಸಂಘದ ಕಾವಲು ಸಮಿತಿಯ ಸದಸ್ಯರಾಗಿ ಅವರು ಮಾಡಿದ ಕೆಲಸದ ಜೊತೆಗೆ ಇಂದಿಗೂ ಸಕ್ರೀಯವಾಗಿ ಅವರು ಕನ್ನಡಪರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿರುವ ರೀತಿ ಇಂದಿನ ಯುವ ಮಹಿಳೆಯರಿಗೆ ಮಾದರಿಯಂತಿದೆ.

ಹಲವಾರು ಹೆಸರಾಂತ ಕನ್ನಡದ ಪತ್ರಕರ್ತೆಯರು, ವಕೀಲರು, ವೈದ್ಯರು, ಕಲಾವಿದರು, ಸರಕಾರಿ ಅಧಿಕಾರಿಗಳು, ರಾಜಕಾರಣಿಗಳು ದೆಹಲಿಯಲ್ಲಿ ಇದ್ದರೂ ಕೂಡಾ ಅವರು ಸಂಘದ ಅತಿಥಿಗಳಾಗಿದ್ದಾರೆಯೇ ಹೊರತು, ಸಕ್ರೀಯರಾಗಿಲ್ಲ. ಇವರೆಲ್ಲ ಮುಂದಿನ ದಿನಗಳಲ್ಲಿ ದಿ.ಡಾ.ಸರೋಜಿನಿ ಮಹಿಷಿ ಅಥವಾ ಶ್ರೀಮತಿ ಉಷಾಭರತಾದ್ರಿಯವರ ಹಾಗೆ ಸಕ್ರೀಯರಾಗಲಿ ಎಂದು ಆಶಿಸುತ್ತೇನೆ.

ಇದೀಗ ನಮ್ಮ ಕಾರ್ಯಕಾರಿ ಸಮಿತಿಯಲ್ಲಿ ಉಪಾಧ್ಯಕ್ಷರಾದ ಶ್ರೀಮತಿ ಆಶಾಲತಾ ಎಂ., ಶ್ರೀಮತಿ ಎಸ್.ಸಿ. ಹೇಮಲತಾ, ಜಂಟೀ ಕಾರ್ಯದರ್ಶಿ ಶ್ರೀಮತಿ ಜಮುನಾ ಸಿ. ಮಠದ, ಕಾರ್ಯಕಾರಿ ಸಮಿತಿಯ ಸದಸ್ಯೆಯರಾದ ಶ್ರೀಮತಿ ಪೂಜಾ ಪಿ. ರಾವ್, ಶ್ರೀಮತಿ ಸುಮಿತಾ ಮುರಗೋಡ ಹಾಗೂ ಅನೇಕ ಮಹಿಳೆಯರು ಸಂಘದಲ್ಲಿ ಕಲೆ, ಸಾಹಿತ್ಯ, ಸಂಗೀತ, ನಾಟಕ ಸಂಘಟನೆ ಹೀಗೆ ಸಂಘದಲ್ಲಿ ಸಕ್ರಿಯರಾಗಿ ತೊಡಗಿಕೊಂಡಿದ್ದಾರೆ. ಆದರೆ ಅವರು ಸಾಧಿಸಬೇಕಾದದ್ದು ಇನ್ನೂ ಬಹಳಷ್ಟಿದೆ. ಅವರಿಗೆ ಮಾಡುವ ಉತ್ಸಾಹ ಮತ್ತು ಸಾಮರ್ಥ್ಯ ಇದೆ. ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಈ ಸುಸಂದರ್ಭದಲ್ಲಿ ಸಮಸ್ತ ಕನ್ನಡ ಮಹಿಳೆಯರಿಗೆ ನನ್ನ ಶುಭಾಶಯಗಳು.

ಮಾರ್ಚ್ 12ರಂದು ಸಂಘವು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸುತ್ತಿರುವ ಸಂದರ್ಭ ಕನ್ನಡದ ದೆಹಲಿಯ ಶ್ರೇಷ್ಠ ಬರಹಗಾರ್ತಿ ಶ್ರೀಮತಿ ರೇಣುಕಾ ನಿಡಗುಂದಿ ಅವರ 'ನಮ್ಮಿಬ್ಬರ ನಡುವೆ' ಕವನ ಸಂಕಲನ ಹಾಗೂ ದೆಹಲಿಯ ಕನ್ನಡದ ಸಾಂಸ್ಕೃತಿಕ ಕ್ಷೇತ್ರದಲ್ಲಿ ಸಕ್ರೀಯವಾಗಿರುವ ಶ್ರೀಮತಿ ಸವಿತಾ ಇನಾಮದಾರ್ ಅವರ ಚೊಚ್ಚಲ ಕೃತಿ 'ರಂಗಿನೋಕುಳಿ' ಕವನ ಸಂಕಲನವನ್ನು ಸಂಘ ಪ್ರಕಟಿಸುತ್ತಿರುವುದು ಸಂಘಕ್ಕೊಂದು ಗೌರವದ ವಿಷಯವೆಂದು ಭಾವಿಸಿದ್ದೇನೆ. ಅ

***ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು***

## ಅಭಿಮತ ರಸಪ್ರಶ್ನೆ

1. ಸಂಘದಲ್ಲಿ ನೃತ್ಯ ಸಿಂಚನ ಕಾರ್ಯಕ್ರಮ ನೀಡಿದ ತಂಡ ಯಾವುದು ?
2. ಈ ಬಾರಿಯ ಅಂಬಿಕೇಶ್ ಕ್ರಿಕೆಟ್ ಪಂದ್ಯಾವಳಿ ಎಲ್ಲಿ ನಡೆಯಿತು? ಟ್ರೋಫಿ ಗೆದ್ದ ತಂಡ ಯಾವುದು?
3. ಬೊಳುವಾರು ಮಹಮ್ಮದ್ ಕುಂಞಿ ಅವರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಕೃತಿ ಯಾವುದು? ಮತ್ತು ಅದರ ನಾಯಕ ಯಾರು?
4. ಸಂಘದಲ್ಲಿ ತಾಳಮದ್ದಳೆ ನಡೆಸಿಕೊಟ್ಟ ತಂಡ ಯಾವುದು?
5. ಕರ್ನಾಟಕದ ನೂತನ ಲೋಕಾಯುಕ್ತರಾಗಿ ನೇಮಕಗೊಂಡವರು ಯಾರು?

ಅಭಿಮತದ ಓದುಗರು ಈ ಮೇಲಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಅಂಚೆ ಮೂಲಕ ಅಥವಾ ಸಂಘದ ಇಮೇಲ್ : dksangha@gmail.com ಮೂಲಕ ದಿನಾಂಕ 25.03.2017ರ ಒಳಗಾಗಿ ತಲುಪಿಸತಕ್ಕದ್ದು. ಎಲ್ಲಾ ಸರಿಯಾದ ಉತ್ತರ ಕಳುಹಿಸಿದವರ ಹೆಸರನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಅಲ್ಲದೇ ಅವರನ್ನು ಯೋಗ್ಯವಾಗಿ ಪುರಸ್ಕರಿಸಲಾಗುವುದು. ರಸಪ್ರಶ್ನೆಯಲ್ಲಿ ಅಭಿಮತ ಸಂಪಾದಕ ಮಂಡಳಿಯವರು, ಅವರ ಮನೆಯವರು, ಸಂಘದ ಕಾರ್ಯಕಾರಿ ಸಮಿತಿಯವರು ಮತ್ತು ಅವರ ಮನೆಯವರು ಭಾಗವಹಿಸುವಂತಿಲ್ಲ.

ಫೆಬ್ರವರಿ 2017ರ ಅಭಿಮತ ಪತ್ರಿಕೆಯಲ್ಲಿ ಪ್ರಕಟವಾದ ರಸಪ್ರಶ್ನೆಗಳಿಗೆ **ಸರಿಯಾದ ಉತ್ತರ**
1) ಅಲ್ಲಮ 2) ಶ್ರೀಮತಿ ಸರೋಜಿನಿ ಶೆಟ್ಟಿ–ಚೋಮನದುಡಿ 3) ಮನೋಹರ ಗ್ರಂಥಮಾಲಾ, ಧಾರವಾಡ 4) ಕಂಬಳ 5) ಶ್ರೀ ಟಿ.ಬಿ. ಜಯಚಂದ್ರ

**ಸರಿಯಾದ ಉತ್ತರ ಕಳುಹಿಸಿದವರು.**
ಶ್ರೀ ಕೆ. ರವೀಂದ್ರ, ಶ್ರೀ ಡಿ.ಎಸ್. ರಾಜಶೇಖರ ಶ್ರೀ ಪಿ. ನಾಗಭೂಷಣ, ಬೆಂಗಳೂರು, ಶ್ರೀ ಡಿ.ಎಸ್. ರಾಜಶೇಖರ, ಶ್ರೀಮತಿ ವಿಮಲಾ ನಾಯ್ಕ್

## ಮುನ್ನೋಟ

ಸಮಸ್ತ ದೆಹಲಿ ಕನ್ನಡಿಗರಿಗೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಶುಭಾಶಯಗಳು. ದೆಹಲಿ ಕರ್ನಾಟಕ ಸಂಘದಲ್ಲಿ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಿವೆ. ದಿನಾಂಕ 12ರಂದು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಸಂಘದಲ್ಲಿ ಆಯೋಜಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಪ್ರದಾನಪಾತ್ರ ಮಹಿಳೆಯರದ್ದೇ ಆಗಿದೆ.

ದೆಹಲಿ ಕರ್ನಾಟಕ ಸಂಘದ ವೇದಿಕೆ ನೂರಾರು ಕಲಾವಿದರುಗಳನ್ನು ಸೃಷ್ಟಿಸಿದೆ. ಮಹಿಳಾ ದಿನಾಚರಣೆಯ ಕಾರ್ಯಕ್ರಮದ ದಿನ ನಮ್ಮವರೇ ಆದ ಶ್ರೀಮತಿ ರೇಣುಕಾ ನಿಡಗುಂದಿ ಅವರ 'ನಮ್ಮಿಬ್ಬರ ನಡುವೆ' ಮತ್ತು ಶ್ರೀಮತಿ ಸವಿತಾ ಇನಾಮದಾರ್ ಅವರ 'ರಂಗಿನೋಕುಳಿ' ಕವನ ಸಂಕಲನಗಳನ್ನು ಬಿಡುಗಡೆ ಮಾಡುತ್ತಿದ್ದೇವೆ. ಇದರ ಜೊತೆ ಜೊತೆಗೆ ವಾರ್ಷಿಕ ಆಟೋಟ ಸ್ಪರ್ಧೆಗಳು 18 ಮತ್ತು 19ರಂದು ನಡೆಯಲಿದೆ. ಕನ್ನಡ ಶಿಕ್ಷಣ ಸಂಸ್ಥೆಯ ಚುನಾವಣೆ 26ರಂದು ನಡೆಯಲಿರುವುದರಿಂದ ಆ ದಿನ ನಡೆಯಬೇಕಾಗಿದ್ದ ಸಂಘದ ಪಿಕ್‌ನಿಕ್ ಮುಂದೂಡಲಾಗಿದೆ. ತಾವುಗಳೆಲ್ಲ ಶಾಲೆಗೆ ಬಂದು ಹೊಸ ಸಮಿತಿಯನ್ನು ಆರಿಸಿ ಶಾಲೆಯ ಏಳಿಗೆಗೆ ಮತ್ತು ಮಕ್ಕಳ ಭವಿಷ್ಯಕ್ಕೆ ಸಹಕರಿಸಬೇಕೆಂದು ಕೋರಿಕೊಳ್ಳುತ್ತೇನೆ. ಮುಖ್ಯವಾಗಿ ನಮ್ಮ ಕನ್ನಡ ಶಾಲೆಯನ್ನು ಪಕ್ಕದಲ್ಲಿರುವ ಪ್ರಖ್ಯಾತ ಸರ್ದಾರ್ ಪಟೇಲ್ ಶಾಲೆಗಿಂತಲೂ ಉತ್ತಮವಾದ ಶಾಲೆಯನ್ನಾಗಿ ಬೆಳೆಸಬೇಕಾಗಿದೆ. ಈ ನಿಟ್ಟಿನಲ್ಲಿ ಚುನಾಯಿತವಾಗಿ ಬರುವ ನೂತನ ಕಾರ್ಯಕಾರಿ ಸಮಿತಿಯು ತುಂಬಾ ಕೆಲಸಗಳನ್ನು ಮಾಡಬೇಕಾಗಿದೆ. ಹೊಸ ಪ್ರಾಂಶುಪಾಲರ ನೇಮಕ, ಶಾಲೆಗೆ ಕರ್ನಾಟಕ ಸರ್ಕಾರ ನೀಡಿರುವ ರೂ. ಒಂದು ಕೋಟಿ ದೇಣಿಗೆ ನೆನೆಗುದಿಗೆ ಬಿದ್ದಿದೆ. ಅದನ್ನು ತರಬೇಕಾಗಿದೆ. ಹಾಗೂ ಸರ್ಕಾರಕ್ಕೆ ಇನ್ನಷ್ಟು ಒತ್ತಡ ತಂದು ಮಾನ್ಯ ಮಂತ್ರಿಗಳಿಂದ ಇನ್ನೂ ಹೆಚ್ಚಿನ ಧನಸಹಾಯ ಬಿಡುಗಡೆ ಮಾಡಿಸಬೇಕಾಗಿದೆ. ಕನ್ನಡ ಶಾಲೆಯನ್ನು ದೇಶದಲ್ಲಿಯೇ ಒಂದು ಮಾದರಿ ಶಾಲೆಯನ್ನಾಗಿ ರೂಪಿಸಬೇಕಾಗಿದೆ. ದೂರದ ದೆಹಲಿಯಲ್ಲಿ 'ಕನ್ನಡ ಶಾಲೆ' ಮತ್ತು 'ದೆಹಲಿ ಕರ್ನಾಟಕ ಸಂಘ' ಕನ್ನಡಿಗರ ಎರಡು ಕಣ್ಣುಗಳಿದ್ದಂತೆ. ಹಾಗಾಗಿ ಶಾಲೆಗೆ ಹೊಸ ಕಾರ್ಯಕಾರಿ ಸಮಿತಿಯನ್ನು ಚುನಾಯಿಸುವಾಗ ಒಂದು ಯೋಗ್ಯ ಮತ್ತು ಪರಿಣಾಮಕಾರಿಯಾದ ವಿದ್ಯಾವಂತರನ್ನೊಳಗೊಂಡ ಮತ್ತು ನಿಸ್ವಾರ್ಥವಾಗಿ ಸ್ವಯಂ ಸೇವಕರಾಗಿ ಶಾಲೆಗೋಸ್ಕರ ದುಡಿಯಬಲ್ಲ ತಂಡವನ್ನು ಆರಿಸುವುದು ನಮ್ಮ ಧರ್ಮವಾಗಬೇಕು.

27ರಿಂದ 31ರವರೆಗೆ ಸ್ಥಳೀಯ ಕನ್ನಡಿಗರಿಗೆ ನೃತ್ಯ ತರಬೇತಿಯನ್ನು ನೀಡಲಾಗುತ್ತಿದೆ. ಹೆಚ್ಚಿನ ಸಂಖ್ಯೆಯಲ್ಲಿ ಬಂದು ಭಾಗವಹಿಸಿ. ನೃತ್ಯ ತರಬೇತಿ ಪಡೆದಂತಹ ಕಲಾವಿದರು ಮತ್ತು ನೃತ್ಯ ತರಬೇತಿ ನೀಡಲಿರುವ ಬಾಯ್ಸ್ ಝೋನ್ ತಂಡದವರು ಜೊತೆಯಾಗಿ ವಾರ್ಷಿಕೋತ್ಸವ ಸಂದರ್ಭದಲ್ಲಿ ಕಾರ್ಯಕ್ರಮವನ್ನು ನೀಡಲಿದ್ದಾರೆ ಹಾಗೂ ಇದೇ ತಿಂಗಳ 29ರಂದು ಕಜಕೀಸ್ತಾನದಿಂದ ಬರಲಿರುವ ಅಂತರರಾಷ್ಟ್ರೀಯ ನೃತ್ಯ ತಂಡ ನೃತ್ಯ ಪ್ರದರ್ಶನ ನೀಡಲಿದೆ. ದಯವಿಟ್ಟು ಎಲ್ಲರೂ ಪಾಲ್ಗೊಳ್ಳಿ. ಅ

*ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ*

## ದೆಹಲಿ ಕರ್ನಾಟಕ ಸಂಘದ ಮುಂಬರುವ ಕಾರ್ಯಕ್ರಮಗಳು

**2017 ಮಾರ್ಚ್ 12** — **ಭಾನುವಾರ ಮಧ್ಯಾಹ್ನ : 2.00 ಗಂಟೆಗೆ**

**ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ**

ಶ್ರೀಮತಿ ರೇಣುಕಾ ನಿಡಗುಂದಿ ಅವರ **'ನಮ್ಮಿಬ್ಬರ ನಡುವೆ'**, ಶ್ರೀಮತಿ ಸವಿತಾ ಇನಾಮದಾರ್ ಅವರ **'ರಂಗಿನೋಕುಳಿ'** ಕವನ ಸಂಕಲನ ಬಿಡುಗಡೆ, ದಿ ಚಾನಲ್ ಥೇಟರ್ ಪಾಂಡವಪುರ ಪ್ರಸ್ತುತಪಡಿಸುವ 'ದಾ ರಿಯೋ ಫೋ'ನ ದಿ ವುಮೆನ್ ಅಲೋನ್ ಆಧಾರಿತ ನಾಟಕ **'ಒಬ್ಬಳು'**, ಸ್ಥಳೀಯ ಸಂಘ ಸಂಸ್ಥೆಗಳ ಮಹಿಳಾ ಕಲಾವಿದರಿಂದ ನೃತ್ಯ, ಸ್ಕಿಟ್, ವೃಂದಗೀತೆ ಹಾಗೂ **ವಿದ್ಯಾರ್ಥಿ ವೇತನ ವಿತರಣೆ**

**2017 ಮಾರ್ಚ್ 18** — **ಶನಿವಾರ ಬೆಳಿಗ್ಗೆ : 10.00 ಗಂಟೆಗೆ**

ಡಾ. ಗುರುರಾಜ ಸಂಗೊಂದಿಮಠ ಅವರ ನೇತೃತ್ವದಲ್ಲಿ ಇಂಡಿಯನ್ ಸ್ಪೈನಲ್ ಇಂಜುರೀಸ್ ಸೆಂಟರ್ ಸಹಯೋಗದೊಂದಿಗೆ **ಆರೋಗ್ಯ ಶಿಬಿರ** ಸ್ಪೈನ್ ಕನ್ಸಲ್ಟೇಶನ್, ಫಿಸಿಯೋಥೆರಪಿ, ರಿಹೆಬಿಲಿಯೇಶನ್ ಅಸೆಸ್‌ಮೆಂಟ್, ಬಿ.ಪಿ. ಮುಂತಾದವುಗಳಿಗೆ ಉಚಿತ ಪರೀಕ್ಷೆ ನೀಡಲಾಗುವುದು.

**ಬೆಳಿಗ್ಗೆ : 10.00 ಗಂಟೆಗೆ**

ಕೇರಂ, ಚೆಸ್ ಸ್ಪರ್ಧೆಗಳು

**2017 ಮಾರ್ಚ್ 19** — **ಭಾನುವಾರ ಬೆಳಿಗ್ಗೆ : 9.00 ಗಂಟೆಗೆ**

ವಾರ್ಷಿಕ ಆಟೋಟ ಸ್ಪರ್ಧೆಗಳು

**2017 ಮಾರ್ಚ್ 25** — **ಶನಿವಾರ ಬೆಳಿಗ್ಗೆ : 9.30 ಗಂಟೆಗೆ**

ವಾರ್ಷಿಕ ಸಾಂಸ್ಕೃತಿಕ ಸ್ಪರ್ಧೆಗಳು

**2017 ಮಾರ್ಚ್ 29** — **ಬುಧವಾರ ಸಂಜೆ : 6.30 ಗಂಟೆಗೆ**

ಕಜಕಿಸ್ತಾನ ಕಲಾವಿದರಿಂದ ನೃತ್ಯ ಕಾರ್ಯಕ್ರಮ

**2017 ಮಾರ್ಚ್ 26** — **ರಿಂದ 31ರವರೆಗೆ**

ಸ್ಥಳೀಯ ಕಲಾವಿದರಿಗೆ ಬಾಯ್ಸ್ ಝೋನ್ ತಂಡದಿಂದ ನೃತ್ಯ ತರಬೇತಿ

**2017 ಏಪ್ರಿಲ್ 2** — **ಭಾನುವಾರ ಮಧ್ಯಾಹ್ನ : 2.00 ಗಂಟೆಗೆ**

ಸ್ಥಳೀಯ ಮತ್ತು ಬಾಯ್ಸ್ ಝೋನ್ ತಂಡದ ಕಲಾವಿದರ ಕಾರ್ಯಕ್ರಮ ಮತ್ತು ವಾರ್ಷಿಕ ಆಟೋಟ ಸ್ಪರ್ಧೆಗಳ ಬಹುಮಾನ ವಿತರಣೆ

**2017 ಏಪ್ರಿಲ್ 9** — **ಭಾನುವಾರ**

**ನಿರಂಜನ ನೆನಪು**–ವಿಚಾರ ಸಂಕಿರಣ ಹಾಗೂ ಎಚ್. ಎಸ್. ಶಿವಪ್ರಕಾಶ್ ಅವರ **'ಮಾಧವಿ'** ನಾಟಕ ಪ್ರದರ್ಶನ

### ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್,** MBBS, MS (AIIMS), ONCO-SURGERY (IRCH, AIIMS) ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 19 ಮಾರ್ಚ್, 2017ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ** B.A.M.S., Msc, Yoga Therapy ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ಚಿಕಿತ್ಸೆಯ ಕುರಿತು ಉಚಿತ ಸಲಹೆ ಭಾನುವಾರ 19, ಮಾರ್ಚ್, 2017ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ** MS, FNB, Spine Surgeon, ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 26 ಮಾರ್ಚ್, 2017ರಂದು ಬೆಳಿಗ್ಗೆ 11 ಗಂಟೆಯಿಂದ.

**ಡಾ. ಭೀಮ್ ಭಟ್** M.D. (AYU) ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ 26 ಮಾರ್ಚ್, 2017ರಂದು ಸಾಯಂಕಾಲ 4 ಗಂಟೆಯಿಂದ.

ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 9560653021/ 9560563203, 011–26109615 / 26104818

ಅಭಿಮತ ಪ್ರಧಾನ ಸಂಪಾದಕರು
ಬಾಲಕೃಷ್ಣ ನಾಯ್ಕ್ ಡಿ.

ಅಭಿಮತ ಸಂಪಾದಕ ಮಂಡಳಿ
ಸಖಾರಾಮ ಉಪ್ಪೂರು, ಚಂದ್ರಶೇಖರ್ ಎನ್.ಪಿ., ಎಸ್. ಕುಮಾರ್

ಸಂಪುಟ 27 ಸಂಚಿಕೆ 6
ಮಾರ್ಚ್ 2017

ಅಭಿಮತ

## ಸಂಪಾದಕರ ಟಿಪ್ಪಣಿಗಳು

# ಅಧಿಕಾರರೂಢ ವ್ಯವಸ್ಥೆಗಳು ಪ್ರತಿರೋಧದ ದನಿಯನ್ನೂ ಕೇಳಬೇಕು

ನವದೆಹಲಿಯಲ್ಲಿ ವಿದ್ಯಾರ್ಥಿಗಳು ಮತ್ತೆ ರಸ್ತೆಗಿಳಿದಿದ್ದಾರೆ. ದೆಹಲಿ ವಿಶ್ವವಿದ್ಯಾಲಯದ ಕಾಲೇಜೊಂದರ ವಿದ್ಯಾರ್ಥಿನಿಯೊಬ್ಬಳು ಇನ್ನೊಂದು ಕಾಲೇಜಿನಲ್ಲಿ ಎರಡು ಬೇರೆ ಬೇರೆ ರಾಜಕೀಯ ಸಿದ್ಧಾಂತಗಳ ವಿದ್ಯಾರ್ಥಿಗಳ ಮಧ್ಯೆ ನಡೆದ ಗಲಭೆ ಮತ್ತು ಹಿಂಸಾಚಾರದ ಬಗ್ಗೆ ತನ್ನ ಅಭಿಪ್ರಾಯಗಳನ್ನು ಸಾಮಾಜಿಕ ಜಾಲತಾಣದಲ್ಲಿ ತೇಲಿ ಬಿಟ್ಟಿದ್ದಳು. ಅದಕ್ಕೆ ಪ್ರತಿಯಾಗಿ ಅವಳ ಬಾಯಿ ಮುಚ್ಚಿಸಿ ಅವಳು ಸಾಮಾಜಿಕವಾಗಿ ಪ್ರತಿಕ್ರಿಯಿಸದಂತೆ ಮಾಡಲಾಯಿತು.

ಅಭಿವ್ಯಕ್ತಿ ಸ್ವಾತಂತ್ರ್ಯದ ಕುರಿತು ನಡೆಯುವ ವಿವಾದ ಅಥವಾ ಚರ್ಚೆ ಇಂದಿನ ವಿದ್ಯಮಾನವಲ್ಲ. ಭಾರತೀಯ ಪರಂಪರೆಯು ಬಹುಮುಖಿ ನೆಲೆಯಲ್ಲಿ ಪುರಾತನ ಕಾಲದಿಂದಲೂ ಭಿನ್ನ ಭಿನ್ನ ಅಭಿಪ್ರಾಯಗಳನ್ನು ಮುಕ್ತ ಮನಸ್ಸಿನಿಂದ ಸ್ವಾಗತಿಸಿದ ನಾಗರೀಕತೆಯಾಗಿದೆ. ನಮ್ಮ ಋಷಿ ಪರಂಪರೆ, ಆಚಾರ್ಯ ಪರಂಪರೆ, ವಿವಿಧ ಧಾರ್ಮಿಕ ಪರಂಪರೆಗಳು ದೇಶದಲ್ಲಿ ಹುಟ್ಟಿ ಬೆಳೆಯಲು ಕಾರಣ ನಮ್ಮ ಬಹುರೂಪಿ ಮತ್ತು ಭಿನ್ನ ಭಿನ್ನ ಸಂಸ್ಕೃತಿಯ ಕೊಡುಗೆಯೇ ಆಗಿದೆ. ಇಂತಹ ಪರಂಪರೆಯನ್ನು ಎತ್ತಿ ಹಿಡಿಯುವ ಸಮಾಜವು ಭಿನ್ನಾಭಿಪ್ರಾಯವನ್ನು ಹತ್ತಿಕ್ಕುವುದು ನಮ್ಮನ್ನು ಬೌದ್ಧಿಕವಾಗಿ ಹಿನ್ನಡೆಸುತ್ತದೆಯಷ್ಟೆ.

ಸ್ವಾತಂತ್ರ್ಯದ ಕಾಲದಲ್ಲಿ ಮತ್ತು ನಂತರ ನಮ್ಮದೇ ಸಂವಿಧಾನವನ್ನು ರಚಿಸುವ ಸಂದರ್ಭದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ನೀಡಬೇಕಾದ ಪ್ರಾಮುಖ್ಯತೆಯನ್ನು ನೀಡಿರುವುದರಿಂದಲೇ ಇಂದು ನಾವು ಅಭಿವ್ಯಕ್ತಿ ಸ್ವಾತಂತ್ರ್ಯದ ಕುರಿತು ಚರ್ಚಿಸುತ್ತಿದ್ದೇವೆ. ನಮ್ಮ ಪ್ರಜಾಪ್ರಭುತ್ವದ ಉಳಿವು ಮತ್ತು ಬೆಳವಣಿಗೆಗೆ ಮುಕ್ತ ಅಭಿವ್ಯಕ್ತಿಯು ಅಡಿಗಲ್ಲಾಗಿದೆ. ತಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆಯಾದ ಸಂದರ್ಭದಲ್ಲೆಲ್ಲಾ ಸಾಮಾನ್ಯ ಪ್ರಜೆಗಳು ವ್ಯವಸ್ಥೆಯ ವಿರುದ್ಧ ಎದ್ದುನಿಂತು ಸಂವಿಧಾನವು ನೀಡಿದ ಅಧಿಕಾರವನ್ನು ಉಳಿಸಿಕೊಂಡಿದ್ದಾರೆ. ಆಡಳಿತ ವ್ಯವಸ್ಥೆಯ ವಿರುದ್ಧ ಹುಟ್ಟುವ ಅಭಿಪ್ರಾಯಗಳು ಬಹಳಷ್ಟು ಬಾರಿ ಅಧಿಕಾರರೂಢ ಸ್ಥಾಪಿತ ಹಿತಾಸಕ್ತಿಗಳ ಪ್ರಮಾದಗಳನ್ನು ತಿದ್ದುವಲ್ಲಿ ಸಹಾಯ ಮಾಡುತ್ತವೆ.

ಆಡಳಿತರೂಢ ವ್ಯವಸ್ಥೆಗಳು ತಮ್ಮ ದೇಶದ ಸಂರಕ್ಷಣೆಯನ್ನು ಮಾಡಿ ಸಾರ್ವಭೌಮತೆಯನ್ನು ಮತ್ತು ಅಧಿಕಾರವನ್ನು ಉಳಿಸಿಕೊಳ್ಳಲು ಕಲೆ, ಸಾಹಿತ್ಯ, ಮಾಧ್ಯಮಗಳನ್ನು ಪ್ರಭಾವಶಾಲಿಯಾಗಿ ಉಪಯೋಗಿಸುತ್ತವೆ. ಜನಸಾಮಾನ್ಯರು ಮತ್ತು ಪ್ರಬಲವಾದ ಅಧಿಕಾರರೂಢ ಆಡಳಿತದ ನಡುವೆ ಪ್ರಯೋಜನಕಾರಿ ಕೊಂಡಿಯಾಗಿರಬೇಕಾದ ಮಾಧ್ಯಮಗಳು ಕೆಲವೊಮ್ಮೆ ಅಧಿಕಾರರೂಢ ವ್ಯವಸ್ಥೆಯನ್ನು ವಿಜೃಂಭಿಸಿ ಅದರ ಭಾಗವಾದಾಗ ಜನಸಾಮಾನ್ಯರು ಅಸಹಾಯಕರಾಗುತ್ತಾರೆ. ಆದರೆ ಅಂತಹ ಸಂದರ್ಭಗಳಲ್ಲಿ ಹಿಂದಿನಿಂದಲೂ ನಮ್ಮ ಬೌದ್ಧಿಕ ಮತ್ತು ವಿಚಾರವಂತ ಮನಸ್ಸುಗಳು ಕಲೆ ಮತ್ತು ಸಾಹಿತ್ಯದ ವಿವಿಧ ಪ್ರಕಾರಗಳ ಮೂಲಕ ಸ್ಥಾಪಿತ ವ್ಯವಸ್ಥೆಯಲ್ಲಿರುವ ಲೋಪದೋಷಗಳನ್ನು ಎತ್ತಿ ತೋರಿಸಿ ಅದನ್ನು ಸರಿಪಡಿಸಲು ಯುಕ್ತವಾದ ಮಾರ್ಗಗಳನ್ನು ತೋರಿಸುತ್ತಿದ್ದವು.

ಆಧುನಿಕ ಕಾಲದಲ್ಲಿ ಬಹುತೇಕ ಪತ್ರಿಕೆಗಳು, ನಿಯತಕಾಲಿಕಗಳು, ಇಲೆಕ್ಟ್ರಾನಿಕ್ ಮಾಧ್ಯಮಗಳು ವಿವಿಧ ರೀತಿಗಳಲ್ಲಿ ಮುತುವರ್ಜಿಯಿಂದ ಈ ಕೆಲಸವನ್ನು ಮಾಡುತ್ತಿವೆ. ಪ್ರಸ್ತುತ ಕಾಲದಲ್ಲಿ ಸಾಮಾಜಿಕ ಮಾಧ್ಯಮಗಳು ಈ ಕಾರ್ಯವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಮಾಡುತ್ತಿವೆ. ಸಾಮಾಜಿಕ ಜಾಲ ತಾಣಗಳು ವ್ಯಕ್ತಿಯೊಬ್ಬನ ಅಭಿಪ್ರಾಯವನ್ನು ವಿಸ್ತೃತವಾದ ಪ್ರೇಕ್ಷಕರ ಅಥವಾ ಓದುಗರ ಎದುರು ತೆರೆದು ಬಿಡುತ್ತದೆ. ಸಾಮಾಜಿಕ ಮಾಧ್ಯಮಗಳ ಮೂಲಕ ಆಡಳಿತರೂಢ ಪ್ರಭುತ್ವವು ವಿಚಾರಗಳನ್ನು ಪ್ರತಿಪಾದಿಸುವ ರೀತಿಯಲ್ಲಿಯೇ, ಅದನ್ನು ಪ್ರತಿರೋಧಿಸುವ ದನಿಗಳನ್ನು ಕೂಡಾ ಕೇಳುವ ವ್ಯವಧಾನವನ್ನು ಹೊಂದಿರಬೇಕು. ಸಂವೇದನಾಶೀಲ ಮತ್ತು ಸೃಜನಶೀಲ ಮನಸ್ಸುಗಳು ವ್ಯವಸ್ಥೆಯ ಲೋಪಗಳಿಗೆ ಪ್ರತಿರೋಧದ ಮೂಲಕ ಪರಿಹಾರಗಳನ್ನು ಕಂಡುಕೊಳ್ಳುತ್ತವೆ.

ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಂಘಟನೆಗಳು ಕೂಡಾ ಜನಸಮೂಹದ ವಿವಿಧ ಆಸಕ್ತಿಗಳನ್ನು ಮತ್ತು ಭಿನ್ನಭಿನ್ನ ವಿಚಾರಗಳನ್ನು ತನ್ನ ಕಾರ್ಯಕ್ಷೇತ್ರದ ವ್ಯಾಪ್ತಿಯಲ್ಲಿ ಸೇರಿಸದಿದ್ದರೆ ಭಿನ್ನಾಭಿಪ್ರಾಯಗಳು ಹೊರಹೊಮ್ಮುತ್ತವೆ. ಅಂತಹ ದನಿಗಳು ವ್ಯವಸ್ಥೆಯ ವಿರುದ್ಧದ ದನಿಗಳಾಗಿ ಕಂಡು ಬಂದರೂ ಅವುಗಳನ್ನು ಸೂಕ್ತವಾದ ರೀತಿಯಲ್ಲಿ ಕೇಳಬೇಕು. ಹಾಗಾಗಿ ಸಂವಿಧಾನದ ಕೊಡುಗೆಗಳಾದ ಮೂಲಭೂತ ಹಕ್ಕು ಮತ್ತು ಅಭಿಪ್ರಾಯ ಸ್ವಾತಂತ್ರ್ಯಗಳ ಮೇಲೆ ದಬ್ಬಾಳಿಕೆ, ದೌರ್ಜನ್ಯ ನಡೆಯದಂತೆ ಎಚ್ಚರದಿಂದಿರಬೇಕು. ಜತೆಗೆ ಅದರ ದುರುಪಯೋಗವಾಗದಂತಹ ಜಾಗ್ರತೆಯನ್ನೂ ಮಾಡಬೇಕು.

*ಬಾಲಕೃಷ್ಣ ನಾಯ್ಕ್ ಡಿ.*





# ಸಂಘದಲ್ಲಿ ನೃತ್ಯಸಿಂಚನ

## ನೃತ್ಯನಿಕೇತನ ಕೊಡವೂರು ತಂಡದಿಂದ ಸಾಹಿತ್ಯಕೃತಿ ಆಧಾರಿತ ನೃತ್ಯ

ದೆಹಲಿ ಕರ್ನಾಟಕ ಸಂಘವು ಇದೇ ಫೆಬ್ರವರಿ 12ರಂದು ಸಂಘದ ಸಭಾಂಗಣದಲ್ಲಿ 'ನೃತ್ಯನಿಕೇತನ' ಕೊಡವೂರು, ಉಡುಪಿ ತಂಡದ ಕಲಾವಿದರಿಂದ 'ನೃತ್ಯ ಸಿಂಚನ' ಎಂಬ ಅದ್ಭುತವಾದ ವಿವಿಧ ಸಾಹಿತ್ಯ ಕೃತಿಗಳನ್ನು ಆಧಾರಿತ ನೃತ್ಯ ಕಾರ್ಯಕ್ರಮವನ್ನು ಏರ್ಪಡಿಸಿತ್ತು. 'ಹಚ್ಚೇವು ಕನ್ನಡದ ದೀಪ', ಜಿ.ಪಿ. ರಾಜರತ್ನಂ ಅವರ 'ಹೆಂಡ ಹೆಂಡ್ತಿ ಕನ್ನಡ ಪದಗಳು', 'ಡೆನ್ನ ಡೆನ್ನಾನ' ತುಳು ಹಾಡುಗಳಿಗೆ ಹಾಗೂ ಶಿವ, ಗಣಪತಿ ಹಾಗೂ ಶ್ರೀದೇವಿಯ ಮಹಿಮೆಯನ್ನು ಕೊಂಡಾಡುವ ಶಾಸ್ತ್ರೀಯ ಭರತನಾಟ್ಯ ಅದಲ್ಲದೆ 'ಒಂದು ಎರಡು... ಹತ್ತರವರೆಗಿನ ಶ್ರೀಕೃಷ್ಣ ಕಂಸವಧೆ' ಹಾಡುಗಳಿಗೆ ಮನಮೋಹಕವಾದ ನೃತ್ಯ ಪ್ರದರ್ಶನ ನೀಡಿ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರರಾದರು.

ಸಂಘದ ಹಿರಿಯ ಸದಸ್ಯರಾದ ಶ್ರೀ ಬಿ.ವಿ. ಬಲ್ಲಾಳ್ ಹಾಗೂ ದೆಹಲಿ ಒಕ್ಕಲಿಗ ಗೌಡ ಸಂಘದ ಅಧ್ಯಕ್ಷರಾದ ಶ್ರೀ ಕೆ.ಎಸ್. ಸೋಮಶೇಖರ್, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರುಗಳು ಸೇರಿ ನಿರ್ದೇಶಕರಾದ ವಿದ್ವಾನ್ ಸುಧೀರರಾವ್ ಕೊಡವೂರು ಮತ್ತು ವಿದುಷಿ ಶ್ರೀಮತಿ ಮಾನಸಿ ಸುಧೀರರನ್ನು ಶಾಲು ಹೊದಿಸಿ, ಪುಷ್ಪಗುಚ್ಛ ಮತ್ತು ಸಂಘದ ಸ್ಮರಣಿಕೆ ನೀಡಿ ಅಭಿನಂದಿಸಿದರು.

ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಈ ಸಂದರ್ಭದಲ್ಲಿ ಮಾತನಾಡುತ್ತಾ, ಕರ್ನಾಟಕದ ಒಂದು ಪುಟ್ಟ ಹಳ್ಳಿ, ಕೊಡವೂರಿನಲ್ಲಿ ಇಂತಹ ಅಮೂಲ್ಯ ಪ್ರತಿಭೆಗಳು ಅಡಗಿವೆ ಎಂಬುದು ನಮ್ಮೆಲ್ಲರನ್ನು ಇಂದು ಆಶ್ಚರ್ಯಚಕಿತರನ್ನಾಗಿ ಮಾಡಿದೆ. ಕನ್ನಡ ಮತ್ತು ತುಳು ಭಾಷೆಯ ವಿವಿಧ ಹಾಡುಗಳಿಗೆ ಅತ್ಯಮೋಘವಾಗಿ ರಾಗ ಹಾಗೂ ನೃತ್ಯ ಸಂಯೋಜನೆ ಮಾಡಿ, ಅಷ್ಟೇ ಪರಿಣಾಮಕಾರಿಯಾದ ಉಡುಗೆ-ತೊಡುಗೆಗಳನ್ನು ತೊಟ್ಟುಕೊಂಡು ಹಿರಿಯ-ಕಿರಿಯ ವಿದ್ಯಾರ್ಥಿನಿಗಳಿಂದ ಇಂತಹ ಒಂದು ಮರೆಯಲಾಗದ ಕಾರ್ಯಕ್ರಮವನ್ನು ನೀಡಿದ್ದಕ್ಕಾಗಿ 'ನೃತ್ಯನಿಕೇತನ' ಕೊಡವೂರು ತಂಡದ ನಿರ್ದೇಶಕರು ಮತ್ತು ವಿದುಷಿಯರನ್ನು ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದಿಸಿದರು. ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ವಂದನಾರ್ಪಣೆ ಸಲ್ಲಿಸಿದರು. ಅ

*ಸಖಾರಾಮ ಉಪ್ಪೂರು*

ನೃತ್ಯನಿಕೇತನ ಕೊಡವೂರು, ಸಂಸ್ಥೆಯು ತನ್ನ 25ನೇ ಸಂಭ್ರಮಾಚರಣೆಯನ್ನು 'ರಜತಪಥ' ಎಂಬ ಹೆಸರಿನಡಿ ಆಚರಿಸಿದ್ದು, ಈ ಶುಭ ಸಂದರ್ಭದಲ್ಲಿ ಸಂಸ್ಥೆಯ ವಿದ್ಯಾರ್ಥಿಗಳಿಗೆ ರಂಗಭೂಮಿಯ ಪಾಠಗಳನ್ನು ಕಲಿಸುವ ಹಾಗೂ ನೃತ್ಯ ನಾಟಕವನ್ನು ಆಯೋಜಿಸುವ ನಿಟ್ಟಿನಲ್ಲಿ ಮಹಾನ್ ಕವಿ ರವೀಂದ್ರರ 'ಚಿತ್ರಾ' ನಾಟಕವನ್ನು ನೃತ್ಯ ಪ್ರಕಾರ ಹಾಗೂ ನಾಟ್ಯರೂಪಕವನ್ನು ಸಂಯೋಜನೆಗೊಳಿಸಿ ಪ್ರಯೋಗಿಸಿದೆ. ಹೆಣ್ಣಿನ ಆಸ್ಮಿತತೆಯನ್ನು ಸಾರುವ ಈ ನೃತ್ಯ ನಾಟಕದಲ್ಲಿ ಸಂಸ್ಥೆಯ 18 ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದು, ಈ ಪ್ರಯೋಗವನ್ನು ದೆಹಲಿಯ ಎನ್.ಎಸ್.ಡಿ.ಯಲ್ಲಿಯೂ ಪ್ರಸ್ತುತಗೊಳಿಸಿದ್ದಾರೆ.



# ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿ ದೆಹಲಿ ತುಳುಸಿರಿ ತಂಡಕ್ಕೆ ಟ್ರೋಫಿ

ದೆಹಲಿ ಕರ್ನಾಟಕ ಸಂಘದ ವತಿಯಿಂದ ನಡೆಯುವ ವಾರ್ಷಿಕ ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿಯ ಟ್ರೋಫಿಯನ್ನು ತನ್ನ ಅಭೂತಪೂರ್ವ ಆಟದ ಪ್ರದರ್ಶನದ ಮೂಲಕ ದೆಹಲಿ ತುಳುಸಿರಿ ತಂಡವು ಮೊದಲ ಬಾರಿಗೆ ತನ್ನದಾಗಿಸಿತು. ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿಯ ಎರಡನೇ ಹಂತದ ಪಂದ್ಯಾವಳಿಯು ಇದೇ ಫೆಬ್ರವರಿ 19ರಂದು ದೆಹಲಿಯ ಹೊರವಲಯದಲ್ಲಿರುವ ಕಂಗನ್‌ಹೇರಿಯ ಡಿ.ಎಸ್. ಕ್ರಿಕೆಟ್ ಮೈದಾನದಲ್ಲಿ ನಡೆದ ಎರಡನೇ ದಿನದ ಪಂದ್ಯಾವಳಿಯಲ್ಲಿ ತುಳುಸಿರಿ ತಂಡವು ಜೆ.ಎಸ್.ಎಸ್.–ಎ ತಂಡದ ಜತೆ ಫೈನಲ್ ಆಟವನ್ನು ಆಡಿತು.

ಟಾಸ್ ಗೆದ್ದು ಮೊದಲು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಜೆ.ಎಸ್.ಎಸ್.–ಎ ತಂಡವು, ದೆಹಲಿ ತುಳು ಸಿರಿ ತಂಡಕ್ಕೆ ಬ್ಯಾಟಿಂಗ್ ಮಾಡಲು ಆಹ್ವಾನಿಸಿತು. ಮೊದಲ ಮೂರು ಓವರ್‌ಗಳಲ್ಲಿ ಜೆ.ಎಸ್.ಎಸ್.–ಎ ತಂಡದ ಬೌಲಿಂಗ್ ತುಂಬಾ ಪ್ರಭಾವಶಾಲಿಯಾಗಿತ್ತು. ಎರಡು ವಿಕೆಟ್‌ಗಳ ಪತನದ ನಂತರ ನಾಯಕ ರಾಘವ ಶರ್ಮಾ ಮತ್ತು ಪ್ರದೀಪ್ ಕುಮಾರ್ ಅವರ ಅದ್ಭುತ ಜೊತೆಯಾಟದಿಂದ ದೆಹಲಿ ಸಿರಿ ತಂಡವು 106ರನ್‌ಗಳನ್ನು ಕಲೆ ಹಾಕುವಲ್ಲಿ ಸಫಲವಾಯಿತು. ಕೊನೆಯ ಓವರ್‌ನಲ್ಲಿ ರಾಘವ ಶರ್ಮಾ ಅವರು 2 ಸಿಕ್ಸರ್‌ಗಳನ್ನು ಬಾರಿಸಿ ತನ್ನ ವೈಯಕ್ತಿಕ 51ರನ್ನುಗಳನ್ನು ಮಾಡಿ ಅಜೇಯರೆನಿಸಿಕೊಂಡರು. ಜೆ.ಎಸ್.ಎಸ್.–ಎ ತಂಡವು ಈ ಲಕ್ಷ್ಯವನ್ನು ಮುಟ್ಟುವಲ್ಲಿ ವಿಫಲವಾಯಿತು. ರಾಘವ ಶರ್ಮಾ ಅವರು ಪಂದ್ಯ ಪುರುಷೋತ್ತಮರೆನಿಸಿಕೊಂಡರು. ದೆಹಲಿ ತುಳು ಸಿರಿಯು ಮೊದಲ ಬಾರಿಗೆ ಅಂಬಿಕೇಶ್ ಸ್ಮಾರಕ ಟ್ರೋಫಿಯನ್ನು ತನ್ನದಾಗಿಸಿಕೊಂಡಿತು.

ದೆಹಲಿ ಕರ್ನಾಟಕ ಸಂಘವು ಏರ್ಪಡಿಸಿದ, ಸಂಘದ ಮಾಜಿ ಅಧ್ಯಕ್ಷ ದಿ.ಕೆ.ಆರ್. ನಾಗರಾಜರವರ ಪುತ್ರ ದಿ. ಅಂಬಿಕೇಶ್ ಸ್ಮಾರಕ 2016–17ರ ಎರಡು ದಿನಗಳ ಕ್ರಿಕೆಟ್ ಪಂದ್ಯಾವಳಿ ಫೆಬ್ರವರಿ 12ರಂದು ಜವಾಹರ್‌ಲಾಲ್ ನೆಹರೂ ವಿಶ್ವವಿದ್ಯಾಲಯದ ಹಳೇ ಕ್ಯಾಂಪಸ್‌ನಲ್ಲಿರುವ ಕೇಂದ್ರೀಯ ಮೀಸಲು ಪೋಲೀಸ್ ಪಡೆಯ ವಿಶೇಷ ಕರ್ತವ್ಯ ಗುಂಪಿನ ಮೈದಾನದಲ್ಲಿ ಪ್ರಾರಂಭಗೊಂಡಿತು, ಈ ಪಂದ್ಯಾವಳಿಯಲ್ಲಿ ಒಟ್ಟು 10 ಕನ್ನಡ ತಂಡಗಳು ಭಾಗವಹಿಸಿದ್ದವು.

ದೆಹಲಿ ಕರ್ನಾಟಕ ಸಂಘದ 10 ಕ್ರಿಕೆಟ್ ತಂಡದಲ್ಲಿರುವ 160 ಆಟಗಾರರು ಸಂಘದ ಸ್ವಯಂ ಸೇವಕರಿದ್ದಂತೆ, ಎಲ್ಲರೂ ಸೌಜನ್ಯಪೂರ್ವಕವಾಗಿ ಸ್ನೇಹದಿಂದ ಪಂದ್ಯಾವಳಿಯನ್ನು ಯಶಸ್ವಿಗೊಳಿಸಬೇಕೆಂದು ಪಂದ್ಯಾವಳಿಯ ಸಂದರ್ಭದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಕರೆಯಿತ್ತರು. ಮುಂದಿನ ವರ್ಷ ಈ ಪಂದ್ಯಾವಳಿಯನ್ನು ಇನ್ನೂ ವ್ಯವಸ್ಥಿತ ಹಾಗೂ ಉತ್ತಮ ರೀತಿಯಲ್ಲಿ ಆಯೋಜಿಸಲಾಗುವುದು ಎಂದರು. ಸುಪ್ರೀಂಕೋರ್ಟ್‌ನ ನ್ಯಾಯಮೂರ್ತಿ ಶ್ರೀ ನಾಗಮೋಹನ್ ದಾಸ್ ವೀಕ್ಷಕರಾಗಿ ಬಂದಿದ್ದು ಪಂದ್ಯಾವಳಿಗೆ ಹೆಚ್ಚಿನ ಮೆರಗನ್ನು ತಂದಿತ್ತು. ಕ್ರೀಡಾ ಸಮಿತಿಯ ಅಧ್ಯಕ್ಷ ಡಾ.ಎಂ.ಎಸ್. ಶಶಿಕುಮಾರ್, ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಪಂದ್ಯಾವಳಿ ಯಶಸ್ವಿಯಾಗಿ ನಡೆಯುವಂತೆ ನೋಡಿಕೊಂಡರು.

ಮೊದಲ ಸುತ್ತಿನ ಪಂದ್ಯದಲ್ಲಿ ಕ್ರೀಡಾ ಬಳಗ ಮತ್ತು ಕನ್ನಡ ಅಡ್ವೋಕೇಟ್ ತಂಡಗಳ ನಡುವೆ ನಡೆದ ಪಂದ್ಯದಲ್ಲಿ ಕನ್ನಡ ಅಡ್ವೋಕೇಟ್ಸ್ ತಂಡವು ಮೊದಲು ಬ್ಯಾಟಿಂಗ್ ಮಾಡಿ ಕ್ರೀಡಾ ಬಳಗ ತಂಡಕ್ಕೆ ಜಯಗಳಿಸಲು 107ರನ್‌ಗಳ ಲಕ್ಷ್ಯವನ್ನು ನೀಡಿತು. ಕನ್ನಡ ಅಡ್ವೋಕೇಟ್ಸ್ ತಂಡವು ಜಯ ಸಾಧಿಸಿತು. 36 ರನ್ ಮತ್ತು 3ವಿಕೆಟ್‌ಗಳನ್ನು ಪಡೆದ ಕನ್ನಡ ಅಡ್ವೋಕೇಟ್ಸ್ ತಂಡದ ಶಬರೀಷ್ ಅವರು ಪಂದ್ಯ ಪುರುಷೋತ್ತಮ ಪ್ರಶಸ್ತಿಗೆ ಪಾತ್ರರಾದರು.

ಎರಡನೇ ಪಂದ್ಯದಲ್ಲಿ ದೆಹಲಿ ಕನ್ನಡ ಪೋಲಿಸ್ ಕಲ್ಯಾಣ ಸಮಿತಿ ಹಾಗೂ ಬೆಳ್ಳಿಯಪ್ಪಾಸ್ ಗ್ರೂಪ್ ತಂಡಗಳ ನಡುವೆ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ದೆಹಲಿ ಕನ್ನಡ ಪೋಲಿಸ್ ಕಲ್ಯಾಣ ಸಮಿತಿ, ಬೆಳ್ಳಿಯಪ್ಪಾಸ್ ಗ್ರೂಪ್ ತಂಡಕ್ಕೆ 49ರನ್‌ಗಳ ಲಕ್ಷ್ಯವನ್ನು ನೀಡಿತು. ಬೆಳ್ಳಿಯಪ್ಪಾಸ್ ಗ್ರೂಪ್ ತಂಡವು ಕೇವಲ 8.4 ಓವರ್‌ಗಳಲ್ಲಿ ಈ ಲಕ್ಷ್ಯವನ್ನು ಮುಟ್ಟುವಲ್ಲಿ ಸಫಲವಾಯಿತು. ಸನ್ನಿ ಎಚ್. ರೈ ಅವರು ಕುಮಾರ್ ಅವರು ಪಂದ್ಯ ಪುರುಷೋತ್ತಮರಾದರು.

ಮೂರನೇ ಪಂದ್ಯದಲ್ಲಿ ಜೆ.ಎಸ್.ಎಸ್.–ಬಿ ಹಾಗೂ ರಾಧಾಕೃಷ್ಣ ಸ್ಮ್ಯಾಶರ್ಸ್ ತಂಡಗಳ ನಡುವೆ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಜೆ.ಎಸ್.ಎಸ್.–ಬಿ, ರಾಧಾಕೃಷ್ಣ ಸ್ಮ್ಯಾಶರ್ಸ್ ತಂಡಕ್ಕೆ 96 ರನ್‌ಗಳ ಲಕ್ಷ್ಯವನ್ನು ನೀಡಿತು. ರಾಧಾಕೃಷ್ಣ ಸ್ಮ್ಯಾಶರ್ಸ್ ತಂಡವು ಈ




ದೆಹಲಿ ತುಳುಸಿರಿ–ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಟ್ರೋಫಿ ವಿಜೇತರು



ರನ್ನರ್ ಅಪ್ ಜೆ.ಎಸ್.ಎಸ್.–ಎ ತಂಡ





ದೆಹಲಿ ಕನ್ನಡ ಪೋಲಿಸ್ ಕಲ್ಯಾಣ ಸಮಿತಿ ಮತ್ತು ಬೆಳ್ಳಿಯಪ್ಪಾಸ್ ಗ್ರೂಪ್ ತಂಡ



ಜೆ.ಎಸ್.ಎಸ್.–ಬಿ ಮತ್ತು ಹೊಯ್ಸಳ ಕ್ರಿಕೆಟರ್ಸ್ ಗುರ್‌ಗಾಂವ್ ತಂಡ

ಗುರಿ ಮುಟ್ಟುವಲ್ಲಿ ವಿಫಲವಾಯಿತು. ಜೆ.ಎಸ್.ಎಸ್.–ಬಿ ತಂಡದ ಗಿರೀಶ್ ಕುಮಾರ್ ಬಿ.ಸಿ ಅವರು ಪಂದ್ಯ ಪುರುಷೋತ್ತಮರಾದರು.

ನಾಲ್ಕನೇ ಪಂದ್ಯದಲ್ಲಿ ಹೊಯ್ಸಳ ಕ್ರಿಕೆಟರ್ಸ್ ಗುರ್‌ಗಾಂವ್ ಹಾಗೂ ಜೆ.ಎಸ್.ಎಸ್.–ಎ ತಂಡಗಳ ನಡುವೆ ನಡೆದ ಪಂದ್ಯದಲ್ಲಿ ಮೊದಲು ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಹೊಯ್ಸಳ ಕ್ರಿಕೆಟರ್ಸ್ ಗುರ್‌ಗಾಂವ್ ತಂಡವು ಜೆ.ಎಸ್.ಎಸ್.–ಎ ತಂಡಕ್ಕೆ 51ರನ್‌ಗಳ ಲಕ್ಷ್ಯವನ್ನು ನೀಡಿತು. ಜೆ.ಎಸ್.ಎಸ್.–ಎ, ತಂಡವು ಜಯಸಾಧಿಸಿ ರಾಜೇಂದ್ರ ಕುಮಾರ್ ಪಂದ್ಯ ಪುರುಷೋತ್ತಮರೆನಿಸಿಕೊಂಡರು.

ಐದನೇ ಪಂದ್ಯವು ಕಳೆದ ಬಾರಿಯ ರನ್ನರ್ ಅಪ್ ಆದ ದೆಹಲಿ ತುಳು ಸಿರಿ ಮತ್ತು ಜೆ.ಎಸ್.ಎಸ್.–ಬಿ ತಂಡಗಳ ನಡುವೆ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ದೆಹಲಿ ತುಳು ಸಿರಿಯು, ಜೆ.ಎಸ್.ಎಸ್.–ಬಿ ತಂಡಕ್ಕೆ 85 ರನ್‌ಗಳ ಲಕ್ಷ್ಯವನ್ನು ನೀಡಿತು. ಜೆ.ಎಸ್.ಎಸ್.–ಬಿ ತಂಡವು ಈ ಗುರಿಯನ್ನು ಮುಟ್ಟುವಲ್ಲಿ ವಿಫಲವಾಯಿತು. ಡಾ. ಸಚಿತ್ ಶೆಟ್ಟಿ ಅವರು ಪಂದ್ಯ ಪುರುಷೋತ್ತಮರೆನಿಸಿಕೊಂಡರು.

ಎರಡನೇ ಹಂತದ ಪಂದ್ಯಾವಳಿಯು ಇದೇ ಫೆಬ್ರವರಿ 19ರಂದು ಕಂಗನ್‌ಹೇರಿಯ ಡಿ.ಎಸ್. ಕ್ರಿಕೆಟ್ ಮೈದಾನದಲ್ಲಿ ನಡೆಯಿತು. ಅಲ್ಲಿ ನಡೆದ ಆರನೇ ಪಂದ್ಯವು, ಸತತವಾಗಿ ಎರಡು ಬಾರಿ ಅಂಬಿಕೇಶ್ ಕ್ರಿಕೆಟ್ ಟ್ರೋಫಿಯನ್ನು ತನ್ನದಾಗಿಸಿಕೊಂಡಂತಹ ಕೆಬಿಎಲ್ ಯುನೈಟೆಡ್ ಮತ್ತು ಬೆಳ್ಳಿಯಪ್ಪಾಸ್ ಗ್ರೂಪ್ ತಂಡಗಳ ನಡೆಯಿತು. ಮೊದಲು ಟಾಸ್ ಗೆದ್ದ ಬೆಳ್ಳಿಯಪ್ಪಾಸ್ ಗ್ರೂಪ್ ಪೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮೊದಲು ಬ್ಯಾಟಿಂಗ್ ಮಾಡಿದ ಕೆಬಿಎಲ್ ಯುನೈಟೆಡ್ ತಂಡವು ಬೆಳ್ಳಿಯಪ್ಪಾಸ್ ಗ್ರೂಪ್‌ಗೆ 75ರನ್‌ಗಳ ಲಕ್ಷ್ಯವನ್ನು ನೀಡಿತು. ಬೆಳ್ಳಿಯಪ್ಪಾಸ್ ಗ್ರೂಪ್ ತಂಡವು ಈ ಮೊತ್ತವನ್ನು ಬೆನ್ನಟ್ಟುವಲ್ಲಿ ವಿಫಲವಾಯಿತು. ಕೆಬಿಎಲ್ ಯುನೈಟೆಡ್‌ನ ರಾಘವೇಂದ್ರ ರಾವ್ ಅವರ ಅದ್ಭುತ ಬ್ಯಾಟಿಂಗ್ ಮತ್ತು ಬೌಲಿಂಗ್‌ನಿಂದ ಪಂದ್ಯಪುರುಷೋತ್ತಮರೆನಿಸಿಕೊಂಡರು.

ಏಳನೇ ಪಂದ್ಯವು, ಕನ್ನಡ ಅಡ್ವೋಕೇಟ್ಸ್ ಮತ್ತು ದೆಹಲಿ ತುಳು ಸಿರಿ ತಂಡಗಳ ಜೊತೆ ನಡೆಯಿತು. ಟಾಸ್ ಗೆದ್ದ ಕನ್ನಡ ಅಡ್ವೋಕೇಟ್ಸ್ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಕನ್ನಡ ಅಡ್ವೋಕೇಟ್ಸ್ ತಂಡವು 12 ಓವರ್‌ಗಳಲ್ಲಿ ದೊಡ್ಡ ಮೊತ್ತವನ್ನು ಕಳೆಹಾಕುವಲ್ಲಿ ವಿಫಲವಾಯಿತು. ದೆಹಲಿ ತುಳುಸಿರಿಯು ಈ ಮೊತ್ತವನ್ನು ಕೇವಲ 6.1 ಓವರ್‌ಗಳಲ್ಲಿ ಗೆಲುವು ಸಾಧಿಸಿ ಫೈನಲ್ ಹಂತವನ್ನು ಸೇರಿತು. ಮಿಥುನ್ ಅವರು ಪಂದ್ಯಪುರುಷೋತ್ತಮರೆನಿಸಿಕೊಂಡರು.

ಎಂಟನೇ ಪಂದ್ಯವು, ಜೆ.ಎಸ್.ಎಸ್.–ಎ ಮತ್ತು ಕೆಬಿಎಲ್ ಯುನೈಟೆಡ್ ತಂಡಗಳ ನಡುವೆ ನಡೆಯಿತು. ಜೆ.ಎಸ್.ಎಸ್.–ಎ ತಂಡವು ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮೊದಲು ಬ್ಯಾಟಿಂಗ್ ಮಾಡಿದ ಕೆಬಿಎಲ್ ಯುನೈಟೆಡ್ ತಂಡವು, ಜೆಎಸ್‌ಎಸ್–ಎ, ತಂಡಕ್ಕೆ 60ರನ್‌ಗಳ ಲಕ್ಷ್ಯವನ್ನು ನೀಡಿತು. ಈ ಮೊತ್ತವನ್ನು ಕೇವಲ 8.2 ಓವರ್‌ಗಳಲ್ಲಿ 4 ವಿಕೆಟ್‌ಗಳನ್ನು ಕಳೆದುಕೊಂಡು ಜೆಎಸ್‌ಎಸ್–ಎ ತಂಡವು ಫೈನಲ್ ಹಂತವನ್ನು ತಲುಪಿತು. ಜೆಎಸ್‌ಎಸ್–ಎ ತಂಡದ ಮಂಜುನಾಥ ಟಿ.ಜಿ. ಅವರ ಅದ್ಭುತ ಬ್ಯಾಟಿಂಗ್ ಪ್ರದರ್ಶನದಿಂದ ಪಂದ್ಯ ಪುರುಷೋತ್ತಮರಾದರು. ಅ

**ಅಭಿಮತ ವರದಿ**

# ಟಿ.ಎಸ್. ನಾಗಾಭರಣ ಸಂದರ್ಶನ



ದೆಹಲಿ ಕರ್ನಾಟಕ ಸಂಘ ಆಯೋಜಿಸಿದ ಕಾರ್ಯಕ್ರಮವೊಂದಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಕನ್ನಡದ ಖ್ಯಾತ ರಂಗ ಮತ್ತು ಚಲನಚಿತ್ರ ನಿರ್ದೇಶಕರಾದ **ಶ್ರೀ ಟಿ.ಎಸ್. ನಾಗಾಭರಣ** ಅವರೊಂದಿಗೆ ಸಂಘದ ಅಧ್ಯಕ್ಷರಾದ **ಶ್ರೀ ವಸಂತ ಶೆಟ್ಟಿ ಬೆಳ್ಳಾರೆ** ಅವರು ಅಭಿಮತಕ್ಕಾಗಿ ವಿಶೇಷವಾಗಿ ಸಂದರ್ಶಿಸಿದರು. ಸಂದರ್ಶನದ ಆಯ್ದಭಾಗವನ್ನು ಅಭಿಮತದ ಓದುಗರಿಗೆ ನೀಡುತ್ತಿದ್ದೇವೆ.

ಕಲೆಯ ಪ್ರಕಾರಕ್ಕೆ ಇನ್ನೊಂದು ಕಲೆಯ ಪ್ರಕಾರ ಸಂವಾದಿಯಾಗಿ ನಿಲ್ಲಬೇಕೇ ಹೊರತು ಬರೀ ವಾದಿಯಾಗಿ ನಿಲ್ಲಬಾರದು. ಧರ್ಮ, ರಾಜಕೀಯ, ಜಾತಿ ಇವೆಲ್ಲವೂ ಈ ರೀತಿಯ ಪ್ರಯತ್ನಗಳನ್ನು ಮುಂದೆ ಮಾಡಲೇಬಾರದೇನೋ ಎನ್ನುವ ಇಕ್ಕಟ್ಟಿಗೆ ಸಿಲುಕಿಸುತ್ತ ಹೋಗುತ್ತದೆ. ಅವುಗಳು ಏನೇ ಇರಲಿ, ಆದರೆ ಅಷ್ಟೇ ಪ್ರೀತಿಯಿಂದ ಸ್ವೀಕರಿಸಿದ ಹಲವು ಕನ್ನಡ ಮನಸ್ಸುಗಳು ಇವೆ, ಆ ಹಲವು ಕನ್ನಡ ಮನಸ್ಸುಗಳು ನನ್ನನ್ನು ನನ್ನ ಕೆಲಸವನ್ನು ನಾನು ಮುಂದುವರಿಸಬಹುದು ಎನ್ನುವ ಧೈರ್ಯವನ್ನು ನೀಡುತ್ತವೆ.

*ವಸಂತ ಶೆಟ್ಟಿ ಬೆಳ್ಳಾರೆ : ತಮ್ಮ ಅಲ್ಲಮ ಪ್ರಭು ಚಲನಚಿತ್ರ ಬಿಡುಗಡೆಯ ಸಂದರ್ಭದಲ್ಲಿ ತಾವು ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮಕ್ಕೆ ಬಂದಿದ್ದೀರಿ. ತಮ್ಮ ಹೊಸ ಚಿತ್ರಕ್ಕೆ ಕನ್ನಡಿಗರ ಬೆಂಬಲ ಹೇಗಿದೆ?*

ಈ ಸಂದರ್ಭದಲ್ಲಿ ಹೇಳುವಾಗ ಒಂದು ರೀತಿಯ ಮುಜುಗರವಾಗುತ್ತದೆ. ನನ್ನ ಯಾವ ಚಿತ್ರಗಳಿಗೂ ಇದುವರೆಗೆ ಯಾವುದೇ ರೀತಿಯ ತೊಂದರೆಯಾಗಿಲ್ಲ. ಎಲ್ಲವೂ ಸುಲಲಿತವಾಗಿ ಬಿಡುಗಡೆಯಾಗಿವೆ. ಈ ನನ್ನ 35ನೇ ಚಲನಚಿತ್ರ ಸತತವಾಗಿ ಅಡಚಣೆಗಳನ್ನು ತಂದೊಡ್ಡಿದೆ. ಒಂದು ಕಲಾ ಕೃತಿಯನ್ನು ಕಲಾಕೃತಿಯಾಗಿಯೇ ನೋಡಬೇಕೇ ವಿನಃ ಅದರ ಹೊರತಾಗಿ ಅಲ್ಲ. ಚಲನಚಿತ್ರವನ್ನು ನೋಡಿದ ಮೇಲೆ ಅದರ ಬಗ್ಗೆ ಸಂವಾದ ಮಾಡೋಣ, ಸರಿ ಇದ್ದರೆ ಸರಿ, ಇಲ್ಲವಾದರೆ ಇಲ್ಲ, ಅಷ್ಟೇ. ಚಿತ್ರ ಬಿಡುಗಡೆಯಾಗುವ ಮುನ್ನವೇ ಅದರ ಬಗ್ಗೆ ಇದ್ದಂತಹ ವಾದ ವಿವಾದ ನನಗೆ ಬಹಳ ಮುಜುಗರ ತಂದಿದೆ. ನಾನು ಇಷ್ಟು ವರ್ಷ ಪಟ್ಟ ಪರಿಶ್ರಮಕ್ಕೆ ಇದು ಉತ್ತರವೇ ಎನ್ನುವ ಪ್ರಶ್ನೆಯನ್ನು ಕೂಡ ತಂದು ನಿಲ್ಲಿಸುತ್ತದೆ. ಇದಕ್ಕಿಂತಲೂ ಎಷ್ಟೋ ಕಳಪೆ ಮಟ್ಟದ ಚಲನಚಿತ್ರಗಳು ಬಂದಿವೆ. ಅದರಲ್ಲೂ ಶರಣ ಸಂಸ್ಕೃತಿಯ ಬಗ್ಗೆ, ಆಗ ಮಾತನಾಡದಿದ್ದವರು ಈಗ ಏಕೆ ಮಾತನಾಡುತ್ತಿದ್ದಾರೆ? ಇದರ ಕಾರಣ ಏನು ಅನ್ನೋದು ಕೂಡಾ ನನಗೆ ಮುಜುಗರವೆನಿಸುತದೆ. ಎಂತೆಂತಹ ವಿವೇಚನಾ ರಹಿತ ಚಲನಚಿತ್ರಗಳನ್ನು ನೋಡಿದ್ದೇವೆ, ಒಂದು ಕಲಾಮಾಧ್ಯಮದಲ್ಲಿ ಅದರಲ್ಲೂ ಒಂದು ದೃಶ್ಯ ಮಾಧ್ಯಮದಲ್ಲಿ ಇವುಗಳನ್ನು ಕಟ್ಟಿಕೊಳ್ಳಬೇಕಾದರೆ ನಾನು ಪಟ್ಟ ಪರಿಶ್ರಮ ಕೇವಲ ಒಂದು ತಿಂಗಳದ್ದಲ್ಲ, ಎರಡು ತಿಂಗಳದ್ದಲ್ಲ, ಸುಮಾರು 5 ವರ್ಷಗಳದ್ದು. ಅದರಲ್ಲಿ 3 ವರ್ಷಗಳ ಸತತವಾದ ಸಂಶೋಧನೆ ಇದೆ, ಅದು ಜನರಿಗೆ ಕಾಣಿಸುವುದಿಲ್ಲ, ಅದ್ದರಿಂದ ಎಲ್ಲೋ ಏನೋ ಹೆಚ್ಚು ಕಡಿಮೆಯಾಗಿದೆ ಅಂದರೆ ಅದನ್ನು ಇಡೀ ಕನ್ನಡ ಸಮುದಾಯ ತನ್ನ ಹೊಟ್ಟೆಯೊಳಗೆ ಹಾಕಿಕೊಳ್ಳಬೇಕಾಗಿತ್ತು ಮತ್ತು ಕ್ಷಮಿಸಲಾರದ ತಪ್ಪನ್ನು ಮಾಡಿಬಿಟ್ಟಿದ್ದಾನೆ ಅನ್ನುವಂತಹದು ಕೂಡಾ. ಈ ಕಲಾ ಮಾಧ್ಯಮದ ಪ್ರಬಲ ದೌರ್ಭಾಗ್ಯ. ನಾನು ಒಂದು ರೀತಿಯಾಗಿ ಪ್ರೋತ್ಸಾಹಕರವಾಗಿಯೇ ಹೇಳುತ್ತಿದ್ದೇನೆ, ಒಂದು ಕಲೆಯ ಪ್ರಕಾರಕ್ಕೆ ಇನ್ನೊಂದು ಕಲೆಯ ಪ್ರಕಾರ ಸಂವಾದಿಯಾಗಿ ನಿಲ್ಲಬೇಕೇ ಹೊರತು ಬರೀ ವಾದಿಯಾಗಿ ನಿಲ್ಲಬಾರದು. ಧರ್ಮ, ರಾಜಕೀಯ, ಜಾತಿ ಇವೆಲ್ಲವೂ ಈ ರೀತಿಯ ಪ್ರಯತ್ನಗಳನ್ನು ಮುಂದೆ ಮಾಡಲೇಬಾರದೇನೋ ಎನ್ನುವ ಇಕ್ಕಟ್ಟಿಗೆ ಸಿಲುಕಿಸುತ್ತ ಹೋಗುತ್ತದೆ. ಅವುಗಳು ಏನೇ ಇರಲಿ, ಆದರೆ ಅಷ್ಟೇ ಪ್ರೀತಿಯಿಂದ ಸ್ವೀಕರಿಸಿದ ಹಲವು ಕನ್ನಡ ಮನಸ್ಸುಗಳು ಇವೆ, ಆ ಹಲವು ಕನ್ನಡ ಮನಸ್ಸುಗಳು ನನ್ನನ್ನು ನನ್ನ ಕೆಲಸವನ್ನು ನಾನು ಮುಂದುವರಿಸಬಹುದು ಎನ್ನುವ ಧೈರ್ಯವನ್ನು ನೀಡುತ್ತವೆ. ಇದು ಬಹಳ ಮುಖ್ಯ ಏಕೆಂದರೆ ಇದು ಕೇವಲ ಒಂದು ಸಿನಿಮಾವಾಗಿ, ಒಂದು ಕೃತಿಯಾಗಿ, ಅಲ್ಲಿ ಯಾವುದೋ ಒಂದು ಲೇಖನಿಯಾಗಿದ್ದರೆ ಅಥವಾ ಒಂದು ಪುಸ್ತಕವಾಗಿದ್ದರೆ, ಅಥವಾ ಒಂದು ನಾಟಕವಾಗಿದ್ದರೆ, ಅದಕ್ಕೆ ಸಿಗಬಹುದಾಗಿದ್ದ ಪ್ರೋತ್ಸಾಹ ಮತ್ತು ವಿರೋಧ ಎರಡೂ ಕೂಡಾ ಈ ಮಾಧ್ಯಮ ಬಂದ ಕೂಡಲೇ ಬಹಳ ಬೇಗ ದೊಡ್ಡದಾಗಿಯೇ ಕಾಣುತ್ತದೆ, ದೊಡ್ಡದಾಗಿ ಕಂಡದ್ದು ಸಂತೋಷ, ಆದರೆ ನನ್ನ ಸಿನಿಮಾ ಅದರ ಪ್ರತಿ ಪದ ಅದರ ಪ್ರತಿ ಚಿತ್ರಕ್ಕೆ ಅದಕ್ಕೆ ನಾನೇ ಆಧಾರ, ಹಾಗಾಗಿ ನಾನು ಆ ಜವಾಬ್ದಾರಿಯನ್ನು ಹೊತ್ತುಕೊಂಡು ಹೇಳುತ್ತೇನೆ, ಇದು ನನ್ನ ಅತ್ಯುತ್ತಮ ಕೃತಿ.

*ವಸಂತ ಶೆಟ್ಟಿ ಬೆಳ್ಳಾರೆ : ಅಲ್ಲಮ ಪ್ರಭುವನ್ನು ನೀವು ಕರ್ನಾಟಕ್ಕೆ ದೃಶ್ಯ ಮಾಧ್ಯಮದಲ್ಲಿ ತೋರಿಸುವ ಪ್ರಯತ್ನದಂತೆ, ನಮ್ಮ ಹಿಂದಿನ ದಾರ್ಶನಿಕರು, ಕಲಾವಿದರು, ಸಾಹಿತಿಗಳನ್ನು ದೃಶ್ಯ ಮಾಧ್ಯಮದ ಮೂಲಕ ಜೀವಂತವಾಗಿ ಇಡಲು ಸಾಧ್ಯವಲ್ಲವೇ?*

ಖಂಡಿತಾ ಸರಿ ಅದು. ಯಾಕೆಂದ್ರೆ ಇವತ್ತು ನಾವು ಪತ್ರಿಕೆಗಳ ಮುಖಾಂತರ ಮಾತಾಡುತ್ತಾ ಇದ್ದೇವೆ. ಈಗ ಚಿತ್ರ ಭಾಷೆ ನಮ್ಮ ಬದುಕಿನ ಭಾಷೆ ಆಗಿ ಬಿಟ್ಟಿದೆ. ನಮಗೆ ಗೊತ್ತಿಲ್ಲದ ಹಾಗೆ ಚಿತ್ರಗಳ ಜೊತೆಯಲ್ಲಿ ನಮ್ಮ ಜೀವನ ಸಾಗಿ ಬರುತ್ತಿದೆ. ಇಂತಹ ಸಮಯದಲ್ಲಿ ನಾವು ಆಡಿಯೋ ವಿಷ್ಯುಯಲ್ ಆಗಿ ಒಂದು ಪಾತ್ರವನ್ನು, ಒಂದು ವಿಚಾರವನ್ನು ಜನರ ಮನಸ್ಸಿಗೆ ಮುಟ್ಟಿಸದಿದ್ದರೆ ಜನರು ಆ ಕುರಿತು ಓದುವುದಿಲ್ಲ. ಅದರ ಬಗ್ಗೆ ತಿಳಿದುಕೊಳ್ಳುವುದೂ ಇಲ್ಲ. ಗೂಗಲ್ ಮಾಡಿ ಬರೇ ಮಾಹಿತಿ ಪಡೆಯುತ್ತಾರೆ ಹೊರತು ಜ್ಞಾನ ಪಡೆಯುವುದಿಲ್ಲ. ಮಾಹಿತಿಗಳು ಜ್ಞಾನವಾಗಿ ಪರಿವರ್ತನೆ ಆಗಬೇಕಾದರೆ ಈ ರೀತಿಯ ಪ್ರಯತ್ನಗಳಾಗಬೇಕು.

ಕನ್ನಡದ ಮಟ್ಟಿಗೆ ಹೇಳುವುದಾದರೆ ಬಹಳಷ್ಟೂ ಪ್ರಯತ್ನಗಳು ಆಗಿವೆ. ಬಸವಣ್ಣನ ಬಗ್ಗೆ ಎರಡೆರಡು ಸಿನಿಮಾ ಮಾಡಿದ್ದಾರೆ. ನನ್ನದೇ ಸಂತ ಶಿಶುನಾಳ ಶರೀಫ ತಗೊಳ್ಳಿ. ಅದು ತತ್ವಗಳ ಮೇಲೆ ಕಟ್ಟಿಕೊಟ್ಟಂತಹ ವ್ಯಕ್ತಿತ್ವ ಮತ್ತು ಜನಮಾನಸದಲ್ಲಿರುವ ವ್ಯಕ್ತಿತ್ವ ಬೇರೇನೆ. ಒಂದು ಐತಿಹ್ಯ ರೂಪುಗೊಳ್ಳುತ್ತಾ ಹೋಗುತ್ತದೆ. ಗಾಂಧಿಯ ಬಗ್ಗೆ ಐತಿಹ್ಯಗಳು ಪ್ರಾರಂಭ ಆಗ್ಲಿಲ್ವಾ? ಹರಿಹರನಾಗಲಿ, ಚಾಮರಸನಾಗಲಿ ಪ್ರತಿಯೊಬ್ಬ ವ್ಯಕ್ತಿಗೂ ಅವನ ಕಾಲ ನಂತರದಲ್ಲಿ, ಶತಮಾನದ ನಂತರ ಅವನ ಬಗ್ಗೆ ಬರೆಯುವಾಗ ಅವರ ಬಗ್ಗೆ ಬರೆಯೋಕ್ಕೆ ಪ್ರಾರಂಭ ಮಾಡಿದಾಗ ಒಂದು ರೀತಿಯ ಐತಿಹ್ಯ ರೂಪುಗೊಂಡುಬಿಟ್ಟಿತ್ತು. ಹೀಗಾಗಿ ಅವರಲ್ಲೇ ಒಂದು ದ್ವಂದ್ವನ್ನು ನೋಡ್ತೇವೆ. ಒಂದು ಪಾತ್ರ ಪೋಷಣೆ ಯಾವುದೋ ಅಮೂರ್ತವಾದ ಪಾತ್ರವನ್ನು ನಿರಾಕಾರವಾದ ಆಕಾರವಾಗಿ ಮಾಡಬೇಕಾದಾಗ ನಾವು ನಮ್ಮ ಅರಿವಿಗೆ ನಿಲುಕುವ ಆಕಾರವನ್ನು ನಿರ್ಮಿಸುತ್ತೇವೆ. ಅದು ಒಬ್ಬ ಕಲಾವಿದನ ಸ್ವಾತಂತ್ರ್ಯ ಕೂಡ. ಇಂತಹ ಹಲವು ಪ್ರಯತ್ನಗಳ ಮುಖಾಂತರ ನಾವು ಇವರನ್ನು ನೀವು ಹೇಳಿದ ಹಾಗೆ ಜೀವಂತವಾಗಿ ಇಟ್ಟುಕೊಳ್ಳುವುದರ ಮುಖಾಂತರವೇ ನಮ್ಮ ಸಂಸ್ಕೃತಿ, ನಮ್ಮ ಸಾಹಿತ್ಯ, ಭಾಷೆ ಇವೆಲ್ಲವನ್ನು ಕಟ್ಟಿಕೊಡುವುದಕ್ಕೆ ಸಾಧ್ಯ. ಇವತ್ತು ನೀವು ಈ ಸಿನಿಮಾ ನೋಡಿದ ಮೇಲೆ ನಿಮಗನ್ನಿಸುವುದು ಏನಪ್ಪಾ ಅಂದ್ರೆ ಓಹೋ, ಅಲ್ಲಮ ಹೀಗೆ ಇದ್ನಾ? ಅದು ಒಂದು ಪ್ರಶ್ನೆ. ಇದ್ದಾ ಅನ್ನುವ ಒಂದು ಪ್ರಶ್ನೆ ಮನಸ್ಸಿಗೆ ಬಂದ್ರೆ ಅಷ್ಟೆ

ಸಾಕು, ಅಲ್ಲಮನ ಆಕಾರನೇ ಕಣ್ಣ ಮುಂದೆ ಬಂದು ನಿಂತುಕೊಳ್ಳುತ್ತದೆ. ಅದು ನಿರಾಕಾರವಾಗಿದ್ದ ಒಂದು ಆಕಾರವನ್ನು ನಾವು ಕಾಣುತ್ತೇವೆ. ಅಲ್ಲಮನ ವಚನಗಳು ಹೀಗಿತ್ತಾ! ಅದು ಸಂಗೀತದ ಮುಖಾಂತರ ತಟ್ಟಿದಾಗ ಹೇಗಾಗುತ್ತೆ? ಸಂಭಾಷಣೆಯ ಮುಖಾಂತರ ತಟ್ಟಿದಾಗ ಯಾವ ವಿಚಾರಗಳನ್ನು ನಮ್ಮ ಮಧ್ಯೆ ಏಳುತ್ತದೆ. ಇದು ಮುಖ್ಯ ಆಗುತ್ತೆ. ಅದರ ಮುಖಾಂತರ ಕನ್ನಡ ಭಾಷೆ ಇಷ್ಟು ಚೆನ್ನಾಗಿದೆಯಾ! ಅನ್ನುವ ಅರಿವು ಮೂಡುತ್ತದೆ. ಇಡೀ 12ನೇ ಶತಮಾನದ ಒಂದು ರಿಕ್ರಿಯೇಶನ್ ಮಾಡ್ಲಿಕ್ಕೆ ಪ್ರಾರಂಭ ಆದಾಗ ನಮಗೆ ಗೊತ್ತಿಲ್ಲದ ಹಾಗೆ ನಾವು ಹಲವು ಇನ್‌ಸೈಟ್‌ಗಳನ್ನು ಕಾರ್ಯಗತ ಮಾಡಿದ್ದೇವೆ. ಇದು ಯಾವ ಚಲನಚಿತ್ರದಲ್ಲೂ ಇದುವರೆಗೆ ಆಗಿಲ್ಲ ಅನ್ನುವಂತಹ ನಂಬಿಕೆಯ ಮೇಲೆ ನಾನು ಈ ಮಾತನ್ನು ಹೇಳ್ತಾ ಇದ್ದೇನೆ. ನಮ್ಮ ಕನ್ನಡದ ಮಟ್ಟಿಗೆ ಇತಿಹಾಸವನ್ನು, ಐತಿಹಾಸಿಕತೆಯನ್ನು ತಳಮಟ್ಟದಲ್ಲಿ, ಪರಿಸರಮಟ್ಟದಲ್ಲಿ ನಿರೂಪಿಸುವ ಕೆಲಸ ಆಗಿಯೇ ಇಲ್ಲ. ಸ ನಮಗೆ ಕೃಷ್ಣದೇವರಾಯನನ್ನು ನೋಡಿದಾಗ ಇದ್ದಕ್ಕಿದ್ದ ಹಾಗೆ ನಮಗೆ ರಾಜಸ್ಥಾನದ ಅರಮನೆ ಬಂದು ಬಿಡುತ್ತದೆ. ಅದು ಕನ್ನಡದ ಆರ್ಕಿಟೆಕ್ಟ್ ಆಗಿ ಬಿಡುತ್ತದೆ. ಕನ್ನಡದ ವೇಷಭೂಷಣಗಳು ಮಾಯವಾಗಿ ಅಲ್ಲಿ ಯಾವುದೋ ಬೇರೆ ರೀತಿಯ ವೇಷಭೂಷಣಗಳು ಬಂದು ಬಿಡುತ್ತವೆ. ನಾವು ಎಲ್ಲವನ್ನೂ ಸಹಿಸಿಕೊಂಡಿದ್ದೇವೆ, ಒಪ್ಪಿಕೊಂಡು ಬಿಟ್ಟಿದ್ದೇವೆ. ಯಾಕೆಂದರೆ, ದೃಶ್ಯ ಮಾಧ್ಯಮ ಅವೆಲ್ಲವನ್ನೂ ಗಟ್ಟಿಗೊಳಿಸಿದೆ. ಆದರೆ ಈ ಚಿತ್ರದಲ್ಲಿ ಪ್ರತಿಯೊಂದು ಮಟ್ಟದಲ್ಲೂ ಕನ್ನಡತನದ ಆವಾಹನೆ ಇದೆ ಎನ್ನುವುದನ್ನು ಗಮನಿಸಬೇಕು. ಇದು ನಮ್ಮದು ಎನ್ನುವ ಹೆಮ್ಮೆಯಿಂದ ನಮ್ಮ ಕನ್ನಡ ಮನಸ್ಸುಗಳು ಇವುಗಳನ್ನು  ಅರ್ಥ ಮಾಡಬೇಕು. ಇದು ನಮ್ಮದು ಎನ್ನುವ ಭಕ್ತಿ ಮತ್ತು ಪ್ರೀತಿ–ವಿಶ್ವಾಸಗಳು ಈ ಚಿತ್ರದ ಮುಖಾಂತರ ಬರಬೇಕು. ಈ ರೀತಿಯ ಸಿನಿಮಾಗಳೇ ನಮ್ಮಲ್ಲಿ ಬರುವುದಿಲ್ಲ. ಕಾರಣ ಏನೆಂದರೆ ಚಲನಚಿತ್ರವು ಉದ್ಯಮವಾದ್ದರಿಂದ, ಜನ ವ್ಯಾಪಾರವನ್ನೇ ಮಾಡುತ್ತಿರುತ್ತಾರೆ. ಹಾಗಾಗಿ ಇಂತಹ ಚಿತ್ರಗಳು ಬರುವುದೇ ಇಲ್ಲ. ಇಡೀ ದಶಕದಲ್ಲಿ ಅದ್ದೂರಿಯಾಗಿ ಇಷ್ಟೊಂದು ಖರ್ಚು ಮಾಡಿ ಇಂತಹ ಚಿತ್ರ ಬಂದಿತ್ತಾ?  ಇದರ ಹಿಂದೆ ನಾಲ್ಕೂವರೆ ಕೋಟಿಗಳ ಪರಿಶ್ರಮ ಇದೆ. ನಮ್ಮ ತಂಡದ ಸುಮಾರು ಐದು ವರ್ಷ ಮತ್ತು ಹರಿಕೋಡೆ ಅವರ ನಾಲ್ಕೂವರೆ ಕೋಟಿ ಇದರ ಹಿಂದೆ ಇದೆ. ಅಲ್ಲಮನನ್ನು ಇವತ್ತು ಒಪ್ಪಿಕೊಳ್ಳದ ಮನಸ್ಸು, ನನ್ನ ಅಲ್ಲಮ ಹೀಗಿರಬಹುದಲ್ಲಾ! ನಾನು ಈ ಥರಾದ ಒಂದು ಸಿನಿಮಾ ಮಾಡಿ ತೋರಿಸುತ್ತೇನೆ ಎಂದು ಸಂವಾದಿಯಾಗಬೇಕು. ಈ ರೀತಿ ನೂರು ಅಲ್ಲಮನನ್ನು ಮಾಡುವಂತಹ ಶಕ್ತಿ ಅವನ ಸಾಹಿತ್ಯಕ್ಕಿದೆ. ನೂರು ಅಲ್ಲಮನನ್ನು ಮಾಡುವ ಬದಲು, ಆ ಸಂವಾದಿಯಾಗಿ ಇನ್ನೊಂದು ಅಲ್ಲಮನನ್ನು ಚಿತ್ರಿಸೋಕ್ಕೆ ಸಾಧ್ಯ ಆದರೆ ನನ್ನ ಶ್ರಮ ಸಾರ್ಥಕ. ಅಲ್ಲಮನನ್ನು ಹಿಡಿಯೋದಕ್ಕೆ ಕಷ್ಟ. ಒಂದು ಕಿಟಕಿಯನ್ನು ತೆರೆದಿಟ್ಟಿದ್ದೇನೆ. ಬೇರೆಯವರು ಆ ಬಾಗಿಲುಗಳನ್ನು ತೆಗೆಯಬಹುದು. ಇನ್ನೊಂದು ಮುಖ್ಯವಾದ ವಿಷಯ ಅಂದ್ರೆ ನಮ್ಮ ಕನ್ನಡದ ಮನಸ್ಸುಗಳ ವಿಭಜನಾ ಸಂಸ್ಕೃತಿ. ಅದು ಮಂಗಳೂರಿಗೆ ಸಂಬಂಧಪಟ್ಟ ಕಂಬಳವೇ ನನಗೆ ಅದರ ಸಂಬಂಧ ಇಲ್ಲಾ ಅನ್ನುತ್ತಾರೆ ನಮ್ಮ ಜನ. ಕನ್ನಡದ ಸಂಸ್ಕೃತಿಯನ್ನು ಒಟ್ಟಾರೆಯಾಗಿ ತೆಗೆದುಕೊಳ್ಳುವುದಿಲ್ಲ. ಕೆಲವರು ತಮಗೆ ಕಾವೇರಿಯ ಬಗ್ಗೆ ಸಂಬಂಧ ಇಲ್ಲ ಅಂತ ಹೇಳುತ್ತಾರೆ. ಕನ್ನಡದ ಸಂಸ್ಕೃತಿಯು ದ್ವೀಪಗಳ ಹಾಗೆ ಆಗಿದೆ. ಇದು ನನ್ನ ಜಾತಿ, ಇದು ನನ್ನ ಪಂಥ, ಇದು ನನ್ನ ಅಲ್ಲಮ, ಇದು ನನ್ನ ಇಲಾಖೆ ಇದಕ್ಕೆ ನೀನು ಬರಬಾರದಾಗಿತ್ತು ಎನ್ನುವಂತಾಗಿದೆ. ಅಂದರೆ ಬೇರೆಯವರು ಬರುವುದಕ್ಕೆ ಹಿಂದೇಟು ಹಾಕುತ್ತಾರೆ. ನಮ್ಮದು ಅನ್ನುವ  ಖುಷಿಯಿಂದ ತಾನೇ ನಾವೆಲ್ಲ ಇಡೀ ತಂಡ ಮಾಡಿದ್ದು. ಅಲ್ಲಮನನ್ನು ನಮ್ಮದಾಗಿಸಿಕೊಂಡ ಮೇಲೆ ನಿಮ್ಮದಾಗಿಸಿದ್ದೇವೆ. ಆ ನಮ್ಮದಾಗಿರುವಂತಹ ಕೃತಿಯನ್ನು ನಿಮ್ಮದಲ್ಲ ಅಂತಾಂದರೆ ಯಾವುದು ನಮ್ಮದು? ಯಾವುದು ನಮ್ಮ ಕನ್ನಡತನ? ಈ ಪ್ರಶ್ನೆಗಳಿಗೆ ಉತ್ತರ ಹುಡುಕಬೇಕಾಗುತ್ತದೆ.

*ವಸಂತ ಶೆಟ್ಟಿ ಬೆಳ್ಳಾರೆ : ಹೊಸ ತಲೆಮಾರಿನವರು ಹೊಸತನದ ಚಲನಚಿತ್ರಗಳನ್ನು ನೋಡುವ ಈ ಸಂದರ್ಭದಲ್ಲಿ ನೀವು ಅಲ್ಲಮನ ಬಗ್ಗೆ ಚಿತ್ರವನ್ನು ಮಾಡಬೇಕು ಎಂಬ ಪ್ರೇರಣೆ ಹೇಗೆ ಬಂತು?*

ಅಲ್ಲಮ ಒಬ್ಬ ಪವಾಡ ಪುರುಷನಾಗಿಯೋ ಅಥವಾ ಕೇವಲ ಒಬ್ಬ ಶೂನ್ಯ ಸಿಂಹಾಸನಾಧೀಶನಾಗಿಯೋ ಅಥವಾ ಕೇವಲ ಮದ್ದಳೆಕಾರನಾಗಿಯೋ ಉಳಿದಿದ್ದರೆ ನಮ್ಮ ಮೇಲೆ ಇಷ್ಟು ಪ್ರಭಾವ ಬೀರುತ್ತಿರಲಿಲ್ಲ. ಅವನ ವಚನಗಳು ನಮ್ಮನ್ನು ಸತತವಾಗಿ ಕಾಡಿದೆ. ಬಹಳ ಸರಳವಾಗಿ ಬಸವಣ್ಣ ಅದನ್ನು ಹೇಳುತ್ತಾ ಹೋಗುತ್ತಾರೆ. ಅವನನ್ನು ಯಾಕೆ ಶೂನ್ಯ ಸಿಂಹಾಸನಾಧೀಶನನ್ನಾಗಿ ಮಾಡಿದ್ದಾರೆ. ಹನ್ನೆರಡು ವರ್ಷ ಕಾದು ಮತ್ತೆ ಸಿಂಹಾಸನಕ್ಕೆ ಕೂರಿಸುತ್ತಾರೆ. ಅಧ್ಯಕ್ಷನನ್ನಾಗಿ ಮಾಡುತ್ತಾರೆ. ಎಂತಹ ದೊಡ್ಡತನ ಬಸವಣ್ಣನದು ಅಂತ ನಾವು ಅರ್ಥಮಾಡಿಕೊಳ್ಳಬೇಕು. ಅವರ ಉದ್ದೇಶ ಸಮಾಜದ ಎಲ್ಲ ಸ್ತರಗಳಲ್ಲಿರುವ ಎಲ್ಲ ಜನರನ್ನು ಒಗ್ಗೂಡಿಸಿಕೊಂಡು ಒಮ್ಮನಸ್ಸಿನಿಂದ ಹೊಸ ಸಮಾಜವನ್ನು ಕಟ್ಟುವುದಾಗಿತ್ತು. ಇದು ಇವತ್ತಿನ ಎಲ್ಲರಿಗೂ ಈ ಆಶಯ ಅರ್ಥ ಆಗಬೇಕು. ಅಂತಹ ವ್ಯಕ್ತಿ ಎಂತೆಂಥವರನ್ನು ತಂದು ಅಲ್ಲಿ ಅವನ ಆದರ್ಶಕ್ಕೆ ಎದ್ದುನಿಂತು ಕೈಜೋಡಿಸಿದ್ದಾರೆ ಅನ್ನುವುದನ್ನು ನೋಡಿದಾಗಲೇ ನಮಗೆ ಅಬ್ಬಾ ಅನ್ನಿಸುತ್ತದೆ, ಸೂಳೆ ಸಂಕವ್ವನಂತಹವಳು ಬರುತ್ತಾಳೆ. ಕೆಳಸ್ತರದ ಮಹಾ ಶರಣೆಯರನ್ನು ಶರಣರನ್ನು ನಾವು ನೋಡುತ್ತೇವೆ. ಇವತ್ತಿನ ಕಾಲಘಟ್ಟದಲ್ಲಿ ಅಂತಹ ವ್ಯಕ್ತಿ ನಮಗೆ ಸ್ಫೂರ್ತಿಯಾಗದೇ, ರಾಜಕೀಯ ಆಗುತ್ತಿದೆ. ಎಲ್ಲರೂ ತಮ್ಮ ತಮ್ಮ ಗುಂಪುಗಳನ್ನು ಕಟ್ಟಿಕೊಂಡು ಅದೇ ಗುಂಪಿನೊಳಗಿಂದ ಗುರುತಿಸಿಕೊಳ್ಳಬೇಕು ಎನ್ನುವ ನಿಷ್ಠೆಗೆ ಒಳಗಾಗಿದ್ದೇವೆ. ನಾವು ನಮ್ಮನ್ನು ಕ್ರೋಢೀಕರಿಸಿಕೊಳ್ಳುತ್ತಾ ಇದ್ದೇವೆ. ಈ ಧ್ರುವೀಕರಣ ರಾಜಕೀಯವಾಗಿ ಸರಿ ಇರಬಹುದು. ಆದರೆ ಸಾಂಸ್ಕೃತಿಕವಾಗಿ ಈ ಧ್ರುವೀಕರಣದಿಂದ ಆಗುವ ಅಪಾಯಗಳು ಬಹಳ ಜಾಸ್ತಿ. ರಣಧೀರ ಕಂಠೀರವ, ಕಿತ್ತೂರು ಚೆನ್ನಮ್ಮ ಇವತ್ತಿಗೂ ಒಂದು ಚಾರಿತ್ರಿಕ ಹಿನ್ನೆಲೆಯ ಸಿನೇಮಾವನ್ನು ಹೇಗೆ ಮಾಡಬೇಕು ಅನ್ನುವುದಕ್ಕೆ ಒಂದು ಕೈಗನ್ನಡಿ ಇದ್ದ ಹಾಗೆ. ಕಿತ್ತೂರು ಚೆನ್ನಮ್ಮ ಒಂದು ಕೈಪಿಡಿ, ಪುಸ್ತಕ. ಆ ತರಹದಲ್ಲಿ ಇತ್ತೀಚಿನ ದಿನಗಳಲ್ಲಿ ಯಾವ ಸಿನೆಮಾವೂ ಆಗಿಲ್ಲ. ಏಕೆಂದರೆ ಐತಿಹಾಸಿಕ ಸಿನೆಮಾಗಳನ್ನು ಮಾಡಿದ್ದಾರೆ, ಶರಣರ ಬಗ್ಗೆ ಸಿನೆಮಾಗಳನ್ನು ಮಾಡಿದ್ದಾರೆ, ಆದರೆ ಯಾವುದು ಆ ದೃಷ್ಟಿಕೋನದಲ್ಲಿ ಸಿನೆಮಾ ಆಗಿಲ್ಲ. ದೃಷ್ಟಿಕೋನ, ಅದರ ಸಹಜತೆ, ಅದರ ಪರಿಸರ, ನಿರ್ಮಾಣ, ಭಾಷೆಯ ಪ್ರಯೋಗ, ಈ ಎಲ್ಲವನ್ನ ಅದು ದೃಷ್ಟಿಯಲ್ಲಿಟ್ಟುಕೊಂಡು ಮಾಡಿರಲಿಲ್ಲ. ಆದ್ದರಿಂದ ಆ ದೃಷ್ಟಿಯಲ್ಲಿ 'ಅಲ್ಲಮ' ಬಹಳ ಬೇರೆಯೇ ಆಗಿ ನಿಂತುಕೊಳ್ಳುತ್ತಾನೆ. ಮತ್ತು ಅದು ಸದಾಕಾಲಕ್ಕೂ ಒಂದು ಸ್ಟಡೀ ಬುಕ್ ಆಗಿ ಉಳಿಯುತ್ತೆ. ನಾಳೆ ಯಾರೋ ಒಬ್ಬನಿಗೆ  ಅಲ್ಲಮನನ್ನು ರೆಫೆರನ್ಸ್ ಮಾಡಬೇಕು ಅಂದರೆ ಅವರು ಪುಸ್ತಕ ನೋಡೋದಿಲ್ಲ, ಅಲ್ಲಮ ಚಿತ್ರವನ್ನು ಸ್ವಲ್ಪ ನೋಡಿ ಅದರಲ್ಲಿ ಅಲ್ಲಮನ ಪಾತ್ರವನ್ನು ಅರ್ಥ ಮಾಡುವಂತಾದರೆ ಅಷ್ಟರಮಟ್ಟಿಗೆ ನಾವು ನಮ್ಮ ಕೆಲಸದಲ್ಲಿ ಯಶಸ್ವಿಯಾಗಿದ್ದೇವೆ ಎನ್ನುತ್ತೇವೆ. ಇವತ್ತು ಇಂತಹ ಚಿತ್ರಗಳ ಮಹಾಪೂರ ಬರಬೇಕಾಗಿದೆ, ಇಲ್ಲದಿದ್ದರೆ ನಮ್ಮ ಸಾಹಿತ್ಯ ಮತ್ತು ಸಂಸ್ಕೃತಿ ಎರಡನ್ನೂ ನಾವು ಕಳೆದುಕೊಳ್ಳುತ್ತೇವೆ. ಯಾರಿಗೆ ನಿನ್ನೆಯ ಬಗ್ಗೆ ಪರಿಚಯ ಇರುವುದಿಲ್ಲವೋ ಅವರು ನಾಳೆಗಳನ್ನು ಕಟ್ಟುವುದಿಲ್ಲ. ಇದು ನನ್ನ ಅನುಭವ, ಇದು ಯಾವಾಗಲೂ ಸದಾ ಅನಿಸಿರುವುದು ಮತ್ತು ಹೇಳುತ್ತಾ ಬಂದಿರುವುದು. ಆದ್ದರಿಂದ ನಾವು ನಿನ್ನೆಗಳ ಬಗ್ಗೆ ಹೇಳಿಕೊಡದೇ ಇದ್ದರೆ ನಮ್ಮ ಮಕ್ಕಳಿಗೆ ಅದು ಹೇಗೆ ಗೊತ್ತಾಗಬೇಕು. ನಾವು ಒಟ್ಟಿನಲ್ಲಿ ಕಟ್ಟಿಕೊಡಬೇಕು ಅವರು ಮುಂದೆ ಸರಿ ತಪ್ಪುಗಳನ್ನು ಅಮೇಲೆ ನಿರ್ಧಾರ ಮಾಡುತ್ತಾರೆ. ಅವರು ಇಷ್ಟವಾದುದನ್ನು ಇಟ್ಟುಕೊಳ್ಳುತ್ತಾರೆ, ಇಷ್ಟವಿಲ್ಲದಿರುವುದನ್ನು ತೆಗೆದುಹಾಕುತ್ತಾರೆ ಅಷ್ಟೇ. ಒಬ್ಬ ಕಲಾವಿದನ ಕರ್ತವ್ಯ ಏನೆಂದರೆ ಸಮಾಜಕ್ಕೆ ಆತ ಸ್ಪಂದಿಸುತ್ತಾ ಸಮಾಜದ ಜೊತೆಯಲ್ಲೆ ಒಮ್ಮನಸ್ಸುಗಳನ್ನು ಕಟ್ಟಿಕೊಡುವಂತಹದ್ದು. ಇದೇ ಕಲಾವಿದನ ಕರ್ತವ್ಯ. ಅವನು ಯಾವತ್ತೂ ಐಲ್ಯಾಂಡ್ ಆಗಿರಬಾರದು. ಎಲ್ಲರನ್ನೂ ಒಟ್ಟಿಗೇ ತೆಗೆದುಕೊಂಡು ಹೋಗಬೇಕು. ನಾನು ಒಂದು ಹಾಡು ಕೇಳುತ್ತಾ ಇದ್ದೆ ಅಂದರೆ ಆಗ ಹಾಡಿದವನು ಯಾವ ಜಾತಿ ಅಥವಾ ಯಾವ ಧರ್ಮದವ ಎಂದಿರುವುದಿಲ್ಲ. ಅವನು ಎಂತಹ ಕೃತಿಯನ್ನು ಮಾಡಿದ್ದಾನೆ ಎನ್ನುವುದರಿಂದ ಅದರಿಂದ ನನ್ನ ಆತ್ಮೀಯನಾಗುತ್ತಾನೆ, ನನ್ನ ಜೊತೆ ಇರುತ್ತಾನೆ, ನನ್ನ ಬದುಕಿನ ಜೊತೆಯಲ್ಲಿ ಪಯಣ ಬೆಳೆಸುತ್ತಾನೆ. ನನ್ನ ನೆನಪಿನಷ್ಟರಲ್ಲಿಯೇ ಇರುವುದಿಲ್ಲ, ನನ್ನ ಬದುಕಿನ ಜೊತೆಯೂ ಇರುತ್ತಾನೆ. ಕೇಳುತ್ತಾ ಕೇಳುತ್ತಾ ಏನು ಸಂಗೀತ, ಅಂತ ಹೇಳುತ್ತಾ ಇದ್ದಾಗ ನಮಗೆ ಆ ಫೋಕ್ ಸಂಗೀತ ಹಾಡಿದ ವ್ಯಕ್ತಿ ಯಾರು, ಯಾವ ಪರಿಸರದವ ಇದು ಯಾವುದೂ ತಲೆಯಲ್ಲಿ ಇರುವುದಿಲ್ಲ, ಅವನ ಧ್ವನಿ ಮತ್ತು ಆ ಧ್ವನಿಯ ಹಿಂದಿರುವ ಭಾವ ನಮ್ಮನು ಮುಟ್ಟುತ್ತಿರುತ್ತದೆ. ಆದ್ದರಿಂದ ಅಂತಹ ಧ್ವನಿ ಮತ್ತು ಭಾವಗಳ ಜೊತೆಯಲ್ಲಿ ನಮ್ಮ ಬದುಕನ್ನು ಕಳೆಯಬೇಕು. ನನ್ನ ಸಿನೆಮಾ ಕೂಡಾ ಹಾಗಾಗಬೇಕು. ಅಬ್ಬಾ ಇಂತಹ ಸಿನೆಮಾನಾ, ಇವತ್ತಿಗೂ ನಾನು ಷರೀಫನ ಸಿನೆಮಾವನ್ನು ಬೋರ್ ಆದಾಗ ನೋಡುತ್ತಿರುತ್ತೇನೆ. ಅಂದರೆ ಸದಾ ಕಾಲ ನನ್ನನ್ನು ಮತ್ತೆ ಮತ್ತೆ ರಿಜುವನೇಟ್ ಮಾಡುತ್ತದೆ. ಈ ಅಲ್ಲಮನೂ ಹಾಗೆ. ನನ್ನನ್ನು ಕಾಡುತ್ತಾ ಇರುತ್ತಾನೆ. ಸಿನೆಮಾ ಮುಗಿದು ಹೋಯಿತು ಅಂತ ಅಲ್ಲವೇ ಅಲ್ಲಮ ನನ್ನನ್ನು ಸದಾಕಾಲ ಕಾಡುವಂತಹ ವಚನಕಾರ. ಅಂದರೆ ಇಡೀ ಸಿನೆಮಾವನ್ನು

ನಾನು ವಚನಾಧಾರಿತ ಸಿನೆಮಾ ಅಂತ ಹೇಳುತ್ತೇನೆ. ಇದು ನನ್ನ ಮುಖ್ಯವಾದಂತಹ ಅಂಶ. ವಚನಾಧಾರಿತ ಸಿನೆಮಾವನ್ನು ನೀವು ಆಸ್ವಾದಿಸಿ ಅದರ ಮುಖಾಂತರ ನಿಮ್ಮ ಅರಿವಿಗೆ ಬರುವಂತಹದನ್ನು ದಯವಿಟ್ಟು ಇಟ್ಟುಕೊಳ್ಳಿ, ಅರಿವಿಗೆ ಬಾರದನ್ನು ಬಿಡಿ. ಅಥವಾ ಮನಸ್ಸಿಗೆ ಹಿಡಿಸದ್ದನ್ನು ಬಿಟ್ಟುಬಿಡಿ ಅಷ್ಟೇ. ಬರುವ ಸಾಕಷ್ಟು ಕ್ಷಣಗಳಿವೆಯೆಲ್ಲ ಆ ಕ್ಷಣಗಳು ನಿಮ್ಮದಾಗಲಿ. ಇವತ್ತಿನ ಒಟ್ಟಾರೆ ಸಾಮಾಜಿಕ ಪರಿಸ್ಥಿತಿ ಹೇಗಪ್ಪಾ ಇದೆ ಅಂದರೆ ಇಂತಹ ಸಿನೆಮಾಗಳಿಗೆ ಪೂರಕವಾಗಿಲ್ಲ. ಹೀಗಾಗಿ ಕನ್ನಡದ ಕರ್ತವ್ಯ, ಕನ್ನಡದ ಮನಸ್ಸುಗಳ ಕರ್ತವ್ಯ ಇಂತಹ ಸಿನೆಮಾಗಳಿಗೆ ಪೂರಕವಾಗಿ ಕೆಲಸಮಾಡಬೇಕು. ನೀವು ಹೇಳಿದ ಹಾಗೆ ಮಹಾತ್ಮ ಗಾಂಧಿಯಿಂದ ಹಿಡಿದು ಎಷ್ಟೋ ಬಯೋಫಿಕ್‌ಗಳಿವೆ, ಎಂತೆಂತಹ ವ್ಯಕ್ತಿಗಳಿದ್ದಾರೆ, ಕೆಳದಿ ಚೆನ್ನಮ್ಮ, ಶಿವಪ್ಪ ನಾಯಕ, ಅದ್ಭುತವಾದ ಕನ್ನಡದ ರಾಜರು, ರಾಣಿಯರು, ಅವರ ಬಗ್ಗೆ ಸಿನೆಮಾ ಅಗಬೇಕು. ಚೆನ್ನಬಸವಣ್ಣನ ವ್ಯಕ್ತಿತ್ವ ಹೇಗಿದೆ. ಅವರ ಬಗ್ಗೆ ಯಾರಾದರೂ ಸಿನೆಮಾ ಮಾಡಿದ್ದಾರಾ? ನನಗೆ ಬಹಳ ಆಸೆ, ಆ ರೀತಿಯದ್ದೇನೋ ಮಾಡಿಸಬೇಕು ಅಂತ. ಈ ಮನಸ್ಸುಗಳಿಗೆ ಪೂರಕವಾಗಿ ಕೆಲಸಮಾಡುವಾಗ ಅದಕ್ಕೆ ಪ್ರೋತ್ಸಾಹಕದಾಯಕವಾಗಿ ಪ್ರತಿಯೊಂದು ಮನಸ್ಸೂ ಇದ್ದರೆ ಅಬ್ಬಾ ನಾನು ಎಲ್ಲರನ್ನೂ ಮುಟ್ಟುತ್ತಾ ಇದ್ದೇನೆ ಅನ್ನುವಂತಹ ಒಂದು ಖುಷಿ ಇರುತ್ತದೆ. ಅದಕ್ಕೆಲ್ಲಾ ಜನರೂ ಕಾರಣರಾಗುತ್ತಾರೆ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕು.

*ವಸಂತ ಶೆಟ್ಟಿ ಬೆಳ್ಳಾರೆ : ಕನ್ನಡ ಚಲನಚಿತ್ರೋದ್ಯೋಮದಲ್ಲಿ ಕನ್ನಡದ ಒಳವು ಇರುವ ಚಿತ್ರ ಈಗ ಇದೆಯಾ ಅಥವಾ ಈಗ ಬರುತ್ತಾ ಇದೆ ಅಂತ ಅನ್ನಿಸುತ್ತಿದೆಯಾ?*

ಬರುತ್ತಾ ಇವೆ. ಕೆಲವಂತು ಹೇಗಿದೆಯೆಂದರೆ 99% ಕಂಗ್ಲೀಷ್‌ಗಳು ಇರುತ್ತವೆ. 99% ಇವತ್ತಿನ ಯುವಕರಿಗೆ ಅಂತ ಏನೇನೋ ಪ್ರೀಮೋಷನಗಳಿಂದ ಬಂದು ಬಿಡುತ್ತವೆ. ಅದರಲ್ಲೂ 1% ಸಿನೆಮಾ ನಿಜವಾಗಿಯೂ ಕನ್ನಡದ ಸಿನೆಮಾಗಳು ವರ್ಕ ಔಟ್ ಆಗಿವೆ. ನಾನು ಬಹಳ ಖುಷಿಯಿಂದ ಆ ಮಾತನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಕಾರಣ ನನ್ನ ಶಿಷ್ಯರಾದ 4–5 ಹುಡುಗರು ಒಳ್ಳೆ–ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಸತ್ಯಪ್ರಕಾಶ್‌ನ ರಾಮರಾಮರೇ ಇರಬಹುದು, ಗಿರಿರಾಜ್ ಅನ್ನುವ ಹುಡುಗ ಬಹಳ ಅದ್ಭುತವಾದಂತಹ ಕಾನ್ಸೆಪ್ಟ್‌ಗಳನ್ನು ಕೊಡುತ್ತಾ ಹೋಗಿದ್ದಾನೆ. ಅವೆರಡಕ್ಕೂ ಸಾಥಿಯಾಗಿ ನಿಲ್ಲುವಂತಹ ಕಬೀರನಂತಹ ಪ್ರಯತ್ನಗಳು ಆಗಬಹುದು. ಇವುಗಳನ್ನು ಗಮನಿಸಿದಾಗ ಕೊನೆಯ ಪಕ್ಷ ಕಂಟೆಂಟ್ ವೈಸ್ ಸಾಕಷ್ಟು ಜನ ಕನ್ನಡತನವನ್ನು ತುಂಬಿಕೊಳ್ಳುವ ಪ್ರಯತ್ನವನ್ನು ಮಾಡುತ್ತಿದ್ದಾರೆ. ಆ ದೃಷ್ಟಿಯಲ್ಲಿ ಕೂಡಾ ಬಹಳ ಮುಖ್ಯವಾಗಿ ಕೆಲವು ಪ್ರಯೋಗಗಳಾಗುತ್ತಾ ಇವೆ. ಯುವಕರು ಬಹಳ ಬುದ್ಧಿವಂತ ಯುವಕರು, ಅವರ ಟೆಕ್ನಾಲಜಿ ಮತ್ತು ಅವರು ಟೆಕ್ನಿಕ್‌ಗಳನ್ನು ಬಳಸುವುದನ್ನು ಬಹಳ ಅದ್ಭುತವಾಗಿ ಮಾಡುತ್ತಾ ಇದ್ದಾರೆ. ಕನ್ನಡದ ಸಿನೆಮಾಗಳು ಯಾವ ಅರ್ಥದಲ್ಲೂ ಯಾವ ಬೇರೆ ಚಲನಚಿತ್ರಗಳಿಗಿಂತ ಕಳಪೆ ಅಲ್ಲವೇ ಅಲ್ಲ. ಹಾಗೇನೆ ಜನರು ಕೂಡಾ ಪ್ರತಿಕ್ರಿಯೆಯನ್ನು ಬಹಳ ಚೆನ್ನಾಗಿ ಕೊಡುತ್ತಾ ಇದ್ದಾರೆ. ಒಟ್ಟಾರೆಯಾಗಿ ಆ ದೃಷ್ಟಿಯಲ್ಲಿ ಕನ್ನಡ ಸಿನೆಮಾಗಳಿಗೆ ಮುಂದಿನ ಭವಿಷ್ಯ ಚೆನ್ನಾಗಿ ಇದೆ ಅಂತ ಹೇಳಬಹುದು. ಆದರೆ, ಈ 99% ಸಿನೆಮಾಗಳಿವೆಯಲ್ಲಾ ಇದು ಇಡೀ ಮಾರುಕಟ್ಟೆಯನ್ನ ಒಟ್ಟಾರೆಯಾಗಿ ಹಾಳು ಮಾಡಿದೆ ಅಂತ ಒಪ್ಪಿಕೊಳ್ಳಬೇಕು ನಾವು. ವಾರಕ್ಕೆ 5 ಸಿನೆಮಾ ಬಿಡುಗಡೆಯಾದರೆ ಪ್ರೇಕ್ಷಕ ಯಾವ ಸಿನೆಮಾ ನೋಡಬೇಕು ಮತ್ತು ನಮ್ಮ ನಮ್ಮಲ್ಲಿ ಎಂತಹ ಪೈಪೋಟಿ ಇರುತ್ತೆ ಅಂದರೆ ಬಹಳ ಚೆನ್ನಾಗಿ ಓಡುತ್ತಾ ಇರುವಂತಹ ಸಿನೆಮಾವನ್ನು ತೆಗೆದು ಇನ್ನೊಂದು ಸಿನೆಮಾ ಬಂದುಬಿಡುತ್ತದೆ. ಹಾಗೇನೆ ಮೌತ್ ಪಬ್ಲಿಸಿಟಿ ಇದ್ದು ಅದನ್ನು ಓಡಿಸಿ ಅದರ ನಂತರ ಆ ಸಿನೆಮಾ ಕ್ಲಿಕ್ ಆಗುತ್ತೆ ಅನ್ನುವಷ್ಟು ಶ್ರಮ ಪಡಲಾರದಷ್ಟು ಪರಿಸ್ಥಿತಿಗೆ ಬಂದು ಬಿಟ್ಟಿದೆ. ಯಾರೋ ಒಬ್ಬರು ನೋಡಿ ಅದು ಚೆನ್ನಾಗಿ ಅಂತ ಹೇಳುವಷ್ಟರಲ್ಲಿ ಆ ಸಿನೆಮಾ ಥಿಯೇಟರ್‌ನಲ್ಲಿ ಇರುವುದಿಲ್ಲ. ಇದು ಕನ್ನಡ ವರ್ಸಸ್ ಕನ್ನಡ, ಹಾಗೇನೇ ಕನ್ನಡ ವರ್ಸಸ್ ಪರಭಾಷೆ, ಕರ್ನಾಟಕದಲ್ಲಿ ಮಾತ್ರ ಈ ಸಮಸ್ಯೆ ಇರುವುದು. ಬೇರೆ ಎಲ್ಲಿಯೂ ಈ ಸಮಸ್ಯೆ ಇಲ್ಲ. ಇದಕ್ಕೆ ಕಾರಣ ಕೇವಲ ಕನ್ನಡ ಮನಸ್ಸುಗಳಷ್ಟೇ ಅಲ್ಲ, ಸರ್ಕಾರ ಕೂಡ. ಎಷ್ಟರ ಮಟ್ಟಿಗೆ ಅದು ಮಲ್ಟಿಪ್ಲೆಕ್ಸ್‌ಗಳನ್ನು ತನ್ನ ಹತೋಟಿಗೆ ತೆಗೆದುಕೊಳ್ಳಬೇಕಿತ್ತೋ ಹಾಗೆ ತೆಗೆದುಕೊಳ್ಳಲಿಲ್ಲ. ಅದು ಆಗಲಿಲ್ಲ. ಇವತ್ತು ತಮಿಳುನಾಡಿನಲ್ಲಿ ಮಲ್ಟಿಪ್ಲೆಕ್ಸ್‌ನ ಥಿಯೇಟರ್ ಟಿಕೆಟ್ ಕೂಡಾ ನೀವು ಹೊರಗಡೆ ಇರುವ ಥಿಯೇಟರ್‌ಗಳಿಗೆ ಸರಿಸಮಾನವಾಗಿ ಇರುತ್ತೆ ಅನ್ನುವುದಾದರೆ ನಮ್ಮಲ್ಲಿ ಯಾಕೆ ಇಲ್ಲ, ನಮ್ಮಲ್ಲಿ ಯಾಕೆ ಸಾಧಿಸೋಕೆ ಆಗಲಿಲ್ಲ. ಇವೆಲ್ಲವೂ ಒಟ್ಟಾರೆ ವ್ಯವಸ್ಥೆಯ ದೋಷ ಅಂತ ಹೇಳಬೇಕಾಗುತದೆ. ಇನ್ನೊಂದು ಬಹಳ ಮುಖ್ಯವಾಗಿ ಆಗುತ್ತಾ ಇರುವುದು ನಮ್ಮಲ್ಲಿ ಮೂರು ಕುಷನ್‌ನ ಸಿಸ್ಟಮ್ ಇತ್ತು ಅಂದರೆ ನಿರ್ಮಾಪಕ, ವಿತರಕರು, ಎಕ್ಸಿಬಿಟರ್ ಅಂತ, ನಿರ್ಮಾಪಕ, ವಿತರಕರ ಜೊತೆಗೆ ಒಂದು ಒಪ್ಪಂದ ಇರುವುದು, ಹಾಗಾಗಿ ಎಲ್ಲವೂ ವಿತರಕರ ಕೈಯಲ್ಲಿ ಇರುವುದು. ಆತ ಎಲ್ಲ ಕಡೆ ಸರಿಯಾಗಿ ಅದನ್ನು ವಿತರಣೆ ಮಾಡಿ ಅದರ ದುಡ್ಡನ್ನು ತಂದು ವಾಪಾಸ್ಸು ನಿರ್ಮಾಪಕರಿಗೆ ಕೊಡುತ್ತಾ ಇದ್ದ. ನಂತರ ಎಕ್ಸಿಬಿಟರ್ ಇದ್ದ, ಅವನದೂ ಕೂಡಾ ವಿತರಕರ ಜೊತೆ ಅವನದೇ ಆದ ಸಂಬಂಧ ಇತ್ತು. ಇವತ್ತು ಆ ಸಂಬಂಧ ಇಲ್ಲ. ಬಹಳ ಕಮ್ಮಿ ಸಂಬಂಧ. ಹೇಗಾಗಿದೆ ಎಂದರೆ ನಿರ್ಮಾಪಕ ಇದಕ್ಕೂ ದುಡ್ಡು ಹಾಕಬೇಕು, ನಿರ್ಮಾಣಕ್ಕೂ ಕೂಡ. ಅದರ ಬಿಡುಗಡೆಗೂ ಕೂಡಾ ಅವನೇ ದುಡ್ಡು ಹಾಕಬೇಕು. ಮೊದಲು ವಿತರಕರು ಆ ದುಡ್ಡನ್ನು ಹಾಕಿಕೊಳ್ಳುತ್ತಾ ಇದ್ದರು. ಈಗ ಹೊರತಾಗಿ ಕೆಲವು ಪ್ರಮುಖ ನಾಯಕ ನಟರುಗಳ ಚಿತ್ರಗಳನ್ನು ಬಿಟ್ಟರೆ, ಉಳಿದ 90% ಸಿನೆಮಾಗಳಿಗೆ ಆಯಾ ನಿರ್ಮಾಪಕರೇ ವಿತರಕರೂ ಆಗಬೇಕಾದಂತಹ ಪರಿಸ್ಥಿತಿಯಲ್ಲಿದ್ದಾರೆ. ಇದೆಂತಹ ಆಘಾತಕಾರಿ ಪರಿಸ್ಥಿತಿ ಎಂದರೆ ಇವುಗಳನ್ನೆಲ್ಲಾ ನಮ್ಮ ಚಲನಚಿತ್ರ ವಾಣಿಜ್ಯ ಮಂಡಳಿ ಗಮನಿಸಬೇಕು, ರೆಗ್ಯುಲೇಷನ್ಸ್ ಆಗಬೇಕು. ನಮಗೇನು ಸಂಬಂಧ ಎಂದು ಹೇಳುವ ಹಾಗಿಲ್ಲ. ನಿರ್ಮಾಪಕ 90% ಏನು ಇದಾನೆ ಅವನಿಗೆ ಸಹಾಯಕವಾಗುವ ಹಾಗೆ ಹಲವು ರೀತಿಯ ವಿಧಾನಗಳನ್ನು ಹುಡುಕಬೇಕು. ಅದರ ಮುಖಾಂತರ ಹೇಗಾದರೂ ಮಾಡಿ ಮಾರುಕಟ್ಟೆಯನ್ನು ಗಟ್ಟಿಮಾಡಬೇಕು. ಇದು ಆಗುತ್ತಾ ಇಲ್ಲ. ಈ ಎಲ್ಲ ಸಮಸ್ಯೆಗಳು ಇದೆ. ಆದರೆ, ಆಶಾದಾಯಕ ಏನು ಎಂದರೆ ಹೊಸ ಹುಡುಗರ ಟೆಕ್ನಾಲಜಿ, ಟೆಕ್ನಿಕ್ ತಿಳುವಳಿಕೆ ಇದೆಯೆಲ್ಲ ಅದು ಅದ್ಭುತವಾಗಿದೆ. ಸಾಕಷ್ಟು ಉತ್ತಮ ಯುವ ನಿರ್ದೇಶಕರು ಬರುತ್ತಾ ಇದ್ದಾರೆ.

*ವಸಂತ ಶೆಟ್ಟಿ ಬೆಳ್ಳಾರೆ : ಒಂದೆರೆಡು ದಶಕಗಳ ಹಿಂದೆ ನಾವು ಕಂಡ ಚಿತ್ರರಂಗ ಮತ್ತು ಈಗಿನ ಚಿತ್ರರಂಗಕ್ಕೆ ಅದನ್ನು ಹೋಲಿಸಿದಾಗ ನಿಮಗೆ ಏನು ಅನ್ನಿಸುತ್ತದೆ?*

ಜವಾಬ್ದಾರಿ ಇರುವ ಪ್ರತಿಯೊಬ್ಬ ನಿರ್ಮಾಪಕನೂ ಯಾವುದೇ ಮಾರುಕಟ್ಟೆಯನ್ನು ನಿರ್ಮಾಣ ಮಾಡುವಾಗ ಆ ಮಾರುಕಟ್ಟೆಯ ಸ್ಥಿತಿಗತಿಗಳನ್ನು ನೋಡಿಕೊಳ್ಳುತ್ತಾನೆ ಮತ್ತು ಆ ಮಾರುಕಟ್ಟೆಗೆ ಬೇಕಾಗುವ ಸಿದ್ಧತೆಗಳೊಡನೆ ಬರುತ್ತಾನೆ. ಇಲ್ಲದಿದ್ದರೆ, ನನ್ನ ಹತ್ತಿರ ದುಡ್ಡು ಇದೆ, ತಕ್ಷಣ ಡಬ್ಬಲ್ ಮಾಡಿಬಿಡೋಣ ಅಂತ ಕೆಲಸಕ್ಕೆ ಹೊರಟು ಬಿಡುತ್ತಾನೆ. ಇಲ್ಲವೇ ನನ್ನ ಮಗನನ್ನು ಹೀರೋ ಮಾಡು, ಮಗಳನ್ನು ಹೀರೋಯಿನ್ ಮಾಡು ಎಂದು ಬರುತ್ತಾರೆ. ಕಲೆಗೆ ಬೆಲೆ ಕೊಟ್ಟು ಒಂದು ಕಲೋದ್ಯಮವನ್ನು ಪೋಷಿಸುವವರಿಗೆ ಒಂದು ಶಿಸ್ತು ಇರುತ್ತದೆ. ಈಗ ರಾಜಕುಮಾರ್ ಕಂಪನಿಯನ್ನೋ, ರವಿಚಂದ್ರನ್ ಕಂಪೆನ್ನೋ ನೋಡಿದರೆ ಹೇಗೆ ಅದು ತನ್ನ ಶಿಸ್ತನ್ನು ಪಾಲಿಸಿಕೊಂಡು ಬರುತ್ತಿತ್ತು ಎನ್ನುವುದನ್ನು ಕಾಣಬಹುದು. ಚಿತ್ರೋದ್ಯಮ ಈಗ ನಿಧಾನವಾಗಿ ಮತ್ತೆ ಕಾರ್ಪೋರೇಟರ್ ಕಲ್ಚರ್‌ಗೆ ಮರುಳುತ್ತಾ ಇದೆ. ಕಾರ್ಪೋರೇಟ್ ಕಲ್ಚರಲ್ ಕೂಡಾ ಯೂನಿಕ್ ಕಲ್ಚರ್‌ನ್ನು ಹೇಳುತ್ತದೆ. ಯೂನಿಕ್ ಕಲ್ಚರಲ್‌ನಲ್ಲಿ ಯಾವುದೇ ಭಾಷೆ, ಸಂಸ್ಕೃತಿ ಮುಖ್ಯವಾಗುವುದಿಲ್ಲ. ಹಿಂದಿಯಲ್ಲಿ ನಡೆಯುವ ಯಾವುದೋ ಟೆಲಿವಿಷನ್ ಸೀರಿಯಲ್‌ನ್ನು ರೀಮೇಕ್ ಮಾಡುವುದು ಇಲ್ಲಿಯ ಕನ್ನಡದ ಯಾವುದೋ ಚಾನಲ್‌ನ ಕರ್ತವ್ಯವಾಗುತ್ತದೆ. ಅವರಿಗೆ ಬೇರೆ ದಾರೀನೆ ಇರುವುದಿಲ್ಲ. ಕನ್ನಡದಲ್ಲಿರುವ ಸಾಹಿತ್ಯ ಕೃತಿಗಳನ್ನು ಅಥವಾ ಸಾಹಿತ್ಯಾಧಾರಿತ ಕತೆಗಳನ್ನು, ಕಾದಂಬರಿಗಳನ್ನು ಅವರಿಗೆ ಮಾಡಬೇಕು ಅಂತ ಅನ್ನಿಸೋದೇ ಇಲ್ಲ. ಮಾಡಲಿಕ್ಕೆ ಬಿಡೋದೂ ಇಲ್ಲ. ಹೀಗಾಗಿ ಇಡೀ ಸಾಂಸ್ಕೃತಿಕ ವಲಯ ಆ ಹಿಡಿತದಲ್ಲಿ ಕೆಲಸ ಮಾಡಲಿಕ್ಕೆ ಪ್ರಾರಂಭವಾಗುತ್ತದೆ. ನಮ್ಮ ಎಲ್ಲ ಸಮಸ್ಯೆಗಳು ಇರೋದು ಈ ರೀತಿಯ ವ್ಯಾಪಾರೀ ಉದ್ಯಮದ ಜೊತೆಯಲ್ಲಿ ನಮ್ಮ ಕಲೆ ಮಿಳಿತವಾಗಿರುವುದರಿಂದ. ಕಲೆಯನ್ನು ಆಸ್ವಾದಿಸುವ ಪ್ರತಿಯೊಂದು ಮನಸ್ಸೂ ಕೂಡಾ ಇದರಿಂದ ನನಗೇನು ಸಿಗುತ್ತೆ ಅಂತ ಯೋಚನೆ ಮಾಡಲಿಕ್ಕೆ ಶುರುಮಾಡುತ್ತೆ. ಅದು ವೈಯಕ್ತಿಕ ವ್ಯಕ್ತಿ ವಿಕೃತತೆಗಳಿಗೆ ದಾರಿ ಮಾಡಿಕೊಡುತ್ತದೆ. ಆದರೆ ನಿಜವಾಗಿಯೂ ಇಡೀ ಕುಟುಂಬದ ಜೊತೆ ನಾನು ಕಳೆಯಬೇಕು, ಆ ಕುಟುಂಬ ಇಡೀ ಸಮಾಜದ ಜೊತೆ ಕಳೆಯಬೇಕು, ಅಂದರೆ ಕುಟುಂಬದ ಇನ್ನಷ್ಟು ಸ್ನೇಹಿತರನ್ನೆಲ್ಲಾ ಕರೆದುಕೊಂಡು ಬರಬೇಕು ಮತ್ತು ಸಿನೆಮಾ ನೋಡಿ, ನಂತರ ಅದರ ಬಗ್ಗೆ ಮಾತನಾಡಿಕೊಂಡು ಆ ರೀತಿಯದು ಇತ್ತಲ್ಲ ಅದು ಆಗೋದೇ ಇಲ್ಲ. ಅವರಿಗೆ ಗೊತ್ತಿಲ್ಲದ ಹಾಗೆ ಅವರು ಸಿನೆಮಾ ನೋಡಬೇಕು, ಇವರಿಗೆ ಗೊತ್ತಿಲ್ಲದ ಹಾಗೆ ಇವರು ಸಿನೆಮಾ ನೋಡಬೇಕು, ನೋಡಿರುತ್ತಾರೆ, ಆದರೆ ಬೇರೆ ಬೇರೆ ಜನರ ಜೊತೆ ನೋಡಿರುತ್ತಾರೆ. ಹೀಗಾಗಿ ಒಂದು ಸಾಮುದಾಯಿಕವಾದ ಒಂದು ಜವಾಬ್ದಾರಿ ಇದೆಯಲ್ಲ ಅದು

ಈಗ ಆಗುತ್ತಾ ಇಲ್ಲ. ಸಿನಿಮಾದ ಮೂಲ ಅದರಲ್ಲಿ ಆ ರೀತಿಯ ಸಮಸ್ಯೆ ಇದೆ. ಮನೋರಂಜನೆ ಮುಖ್ಯವೇ ಹೊರತು ಮನೋವಿಕಾಸ ಅಲ್ಲ. ಹಾಗಾಗಿ ಮನೋರಂಜನೆಗೆ ಬೇಕಾದಾಗ ಏನು ಬೇಕಾದರೂ ಮಾಡಬಹುದು. ನಾವು ಏತೆಂತಹ ಚಿತ್ರಗಳನ್ನು ನೋಡುತ್ತೇವೆ ಎಂದರೆ, ನಿರ್ಮಾಪಕರು ಏಕೆ ಹಣ ಹಾಕಿ ಆ ರೀತಿಯ ಚಿತ್ರಗಳನ್ನು ಮಾಡುತ್ತಾರೆ ಅಂತ ಅನ್ನಿಸುತ್ತದೆ. ಅವನು ಸೋತರೂ ಕೂಡಾ ಇನ್ನೊಬ್ಬ ವ್ಯಕ್ತಿ ಬಂದು ನಾನು ಮಾಡುತ್ತೇನೆ ಎಂದು ನಿಲ್ಲುತ್ತಾನೆ. ಇನ್ನೊಂದು ಏನೋ ಒಂದು ವಿಕೃತಿಗೆ ದಾರಿ ಮಾಡಿಕೊಡುತ್ತಾನೆ. ಇದು ಕನ್ನಡ ಚಿತ್ರರಂಗದಷ್ಟೇ ಅಲ್ಲ ಇಡೀ ಭಾರತೀಯ ಚಲನಚಿತ್ರ ರಂಗದಲ್ಲಿ ಆಗುತ್ತಿರುವಂತಹ ಒಂದು ತಲ್ಲಣ. ಅದರ ಮಧ್ಯದಲ್ಲೂ ಕೂಡಾ ನಾನು ಏಕೆ ಆಶಾಭರಿತನಾಗಿ ಏಕೆ ಹೇಳುತ್ತೇನೆಂದರೆ ನಾಳಿನ ಸಿನೆಮಾಗಳು ಉತ್ತಮವಾಗಿ ಬರಲಿ, ಅದು ಬರುವುದರ ಮುಖಾಂತರ ಕನ್ನಡತನ ಉಳಿಯಲಿ ಎನ್ನೋ ಆಸೆ, ಅದು ಅಲ್ಲಮನಿಂದಲೇ ಪ್ರಾರಂಭವಾಗಲಿ ಎಂದು ಇನ್ನೊಂದು ಆಸೆ.

*ವಸಂತ ಶೆಟ್ಟಿ ಬೆಳ್ಳಾರೆ : ಸರ್, ನೀವು ಮಾಡಿದ ಎಲ್ಲ ಚಿತ್ರಗಳು ಯಶಸ್ಸನ್ನು ಕಂಡಿದೆ, ಹೆಚ್ಚಿನ ಚಿತ್ರಗಳಿಗೆ ರಾಜ್ಯಮಟ್ಟದ ಮತ್ತು ರಾಷ್ಟ್ರಮಟ್ಟದ ಪ್ರಶಸ್ತಿಗಳು ಬಂದಿದೆ, ಅದು ಬರುತ್ತಲೇ ಇದೆ, ಇದರ ಗುಟ್ಟೇನು?*

ಪ್ರಾಮಾಣಿಕ ಪ್ರಯತ್ನ. ಏಕೆಂದರೆ ಯಾವತ್ತೂ ನಾನು ಪ್ರಶಸ್ತಿ ಬರಲಿ ಎಂದು ಸಿನೆಮಾ ಮಾಡಲಿಲ್ಲ, ಹಾಗೇನೆ ಡಿಸೆಂಬರ್ 30ರೊಳಗೆ ಸೆನ್ಸಾರ್ ಮಾಡಿ ಹಾಕಿಬಿಟ್ಟರೆ, ಪ್ರಶಸ್ತಿ ಬಂದು ಬಿಡುತ್ತೆ, ಇಷ್ಟೇ ಲಕ್ಷದಲ್ಲಿ ಮಾಡಬೇಕು, ಇಷ್ಟೇ ಲಕ್ಷದಲ್ಲಿ ಮಾಡಿದರೆ ಸಬ್ಸಿಡಿ ಬಂದುಬಿಟ್ಟರೆ ಸಾಕು ಎನ್ನುವ ಲೆಕ್ಕಾಚಾರದ ಮಧ್ಯದಲ್ಲಿ ಸಿನೆಮಾ ಮಾಡಲಿಲ್ಲ. ಹಾಗಂದ ಮಾತ್ರಕ್ಕೆ ಲೆಕ್ಕಾಚಾರವಿಲ್ಲದೇ ಸಿನೇಮಾ ಮಾಡಿಲ್ಲ. ನಾನು ಹೇಳುವುದು ಸಿನೆಮಾ ಫಾರ್ ಸಿನೆಮಾ ಸೇಕ್, ಆ ಪ್ರೀತಿ, ಆ ಪ್ರಾಮಾಣಿಕತೆ ಇರಬೇಕು. ಅದರಿಂದ ಏನಾಗುತ್ತೆ, ಆ ಸಬ್ಜೆಕ್ಟ್ ಯಾವ ಬಜೆಟ್‌ನ್ನು ಕೇಳುತ್ತೋ ಅದನ್ನು ಕೊಡಲೇಬೇಕಾಗುತ್ತೆ. ಇವತ್ತು ಅಲ್ಲಮನಿಗೆ ನಾಲ್ಕೂಕಾಲು ಕೋಟಿ ಆಗಿದೆ ಎಂದರೆ ಆ ಸಬ್ಜೆಕ್ಟ್ ಡಿಮ್ಯಾಂಡ್ ಅಷ್ಟೇ. ಯಾರಾದರೂ ಮಾಡ್ತಾರೇನ್ರಿ ಒಂದು ಪೈಸೆ ಬರೋಲ್ಲ ಅಂತಹದರಲ್ಲಿ ನಾಲ್ಕೂಕಾಲು ಕೋಟಿ ಹಾಕಿಕೊಂಡು ನಿಮ್ಮ ನಿರ್ಮಾಪಕರನ್ನು ಕಷ್ಟಕ್ಕೆ ಸಿಲುಕಿಸಿದ್ದೀರಲ್ಲಾ ಅಂತ ಹೇಳಬಹುದು, ನಿಜ, ಆದರೆ ಆ ವಿಷಯವನ್ನು ತೆಗೆದುಕೊಂಡ ದಿವಸವೇ ಗೊತ್ತಿತ್ತು, ಇಲ್ಲ ಸರ್, ಇದು ಇಷ್ಟು ಆಗುತ್ತೆ ಅಂತ 2.5 ಕೋಟಿ ಅನ್ನು ಅಂತು ದಾಟಿಯೇ ದಾಟುತ್ತೆ ಅಂತ ಅವರಿಗೆ ಹೇಳಿದ್ದೆ. ಅಂದರೆ ನಾನು ಯಾವತ್ತೂ ಈ ರೀತಿಯ ದೊಡ್ಡ ಬಜೆಟ್‌ನ ಸಿನೆಮಾಗಳನ್ನು ಮಾಡಿದವನೂ ಅಲ್ಲ ನಾನು. ಅದರೆ  ಕಥೆಯ ಡಿಮ್ಯಾಂಡು ಇತ್ತು. ಪರಿಸರದ ನಿರ್ಮಾಣದ ಡಿಮ್ಯಾಂಡು ಇತ್ತು. ಇವೆಲ್ಲವನ್ನೂ ಯೋಚನೆ ಮಾಡಿದಾಗ ನಾವು ಲೋ ಬಜೆಟ್‌ನಲ್ಲಿ ಸಿನೆಮಾ ಮಾಡುತ್ತಿದ್ದವರು ಆ ಲೋ ಬಜೆಟ್‌ನಲ್ಲಿಯೇ ಪ್ರಯೋಗಗಳನ್ನು ಮಾಡುತ್ತಿದ್ದವರು. ಖಂಡಿತಾ ಆ ಲೋ ಬಜೆಟ್ ಮುಖ್ಯ ನಮ್ಮಲ್ಲಿ. ಪಾರ್ವತಿ ರಾಜಕುಮಾರ್ ಅವರೇ ಹೇಳುತ್ತಿದ್ದರು ಎಷ್ಟು ಬೇಕು ಅಷ್ಟು ಖರ್ಚು ಮಾಡಿ ಅಂತ. ನಮ್ಮ ಗುಲ್ಬರ್ಗ ವರ್ಗೀಸ್ ಅಂತ ನಿರ್ಮಾಪಕರು ಇದ್ದರು ಅವರು ಬಹಳ ಚೆನ್ನಾಗಿ ಹೇಳೋರು, ಕಾನಾ ಕಾವೋ ಬಾಯಿ ನೆಗೆಟಿವ್ ಮತ್ ಕಾನಾ ಅಂತ. ಅಂದರೆ ಎಷ್ಟರ ಮಟ್ಟಿಗೆ ಬೇಕೋ ಅಷ್ಟನ್ನು ಪ್ರಯೋಗಿಸಿಕೊಂಡು ಮಾಡವಷ್ಟು ಸಮಯ. ನನ್ನ ಚಿಗುರಿದ ಕನಸು ಸಿನೆಮಾ ಸ್ವಲ್ಪ ದೊಡ್ಡ ಬಜೆಟ್ ಆಯಿತು. ಶಿವರಾಜ್ ಕುಮಾರ್ ಅವರದ್ದು, ಅಮ್ಮ ಅದನ್ನೇ ಹೇಳಿದ್ದರು, ನಮ್ಮ ಬಜೆಟ್‌ನ್ನು ಮೀರುತ್ತಿದ್ದೇವೆ ಈ ಸಿನೆಮಾದಲ್ಲಿ ಅಂತ. ಕಮರ್ಷಿಯಲಿ ಫ್ಯೆಲ್ಯೂರ್ ಆಯಿತು. ಸಿನೆಮಾ ಓಡಲಿಲ್ಲ. ಅವರಿಗೆ ತುಂಬಾ ಬೇಜಾರಾಯಿತು. ಇನ್ನೇಲೆ ಕಾದಂಬರಿಗಳನ್ನು ಸಿನೆಮಾ ಮಾಡೋದೇ ಇಲ್ಲ ಅಂತ ಹೇಳಿದರು. ನಂತರ ರಾಜಕುಮಾರ್ ಕುಟುಂಬ ಅದರ ನಂತರ ಯಾವ ಕಾದಂಬರಿಗಳನ್ನು ಸಿನೆಮಾ ಮಾಡಲಿಲ್ಲ. ನೋಡಿ ಹೇಗೆ ಕನ್ನಡದ ಒಂದು ಪ್ರತಿಷ್ಠಿತವಾದ ಒಂದು ಸಂಸ್ಥೆ ಅಂತಹ ಸಿನೆಮಾಗಳನ್ನು ಮಾಡುತ್ತಿದ್ದಾಗ ಜನ ಪ್ರೋತ್ಸಾಹದಾಯಕವಾಗಿಲ್ಲ ಎಂದಾಗ ನನಗೆ ಬೇಕಾಗಿಲ್ಲ ಅಂದರೆ ಅಲ್ಲಿಗೆ ಮುಗಿದೇ ಹೋಯಿತಲ್ಲ, ಉದಾಹರಣೆಗೆ ನಾನು ಇಂತೆಲ್ಲಾ ಸಮಸ್ಯೆಗಳಿವೆ ಇಂತಹ ಸಿನಿಮಾಗಳನ್ನು ಮಾಡಲೇ ಬಾರದು ಇನ್ನೇಲೆ, ಯಾರಿಗೆ ಬೇಕು, ಕಾಲೇಜು, ಪ್ರಾಯ ಪ್ರಾಯ ಅ ರೀತಿಯ ಸಿನೆಮಾಗಳನ್ನು ನಾನು ಮಾಡಿದ್ದೇನೆ, ಮಾಡಿಲ್ಲ ಅಂತಲ್ಲ, ಅದನ್ನು ಮಾಡಲಿಕ್ಕೆ ಬರುತ್ತೆ ನನಗೆ ಅಂತ ಮಾಡಲಿಕ್ಕೆ ಶುರು ಮಾಡಿದರೆ ಅಲ್ಲಿಗೆ ಮುಗೀತಲ್ಲ. ಈ ರೀತಿಯ ಯೋಚನೆಗಳೇ ನಿಂತು ಹೋಗಿಬಿಡುತ್ತವೆಯಲ್ಲ? ನಾನು ಹೇಳೋದು ಎಲ್ಲವೂ ಪ್ರೇಕ್ಷಕನ ಜೊತೆ ಸಂಬಂಧವಿರುವಂತಹದ್ದು. ಸಿನೆಮಾ ಸೋತರೂ ಕೂಡಾ ನಾನು ಪ್ರಯತ್ನ ಮಾಡುತ್ತಲೇ ಇರಬೇಕು, ಪ್ರೇಕ್ಷಕ ಅದಕ್ಕೆ ರಿಯಾಕ್ಟ್ ಮಾಡುತ್ತಲೇ ಇರಬೇಕು. ಆದ್ದರಿಂದ ಲೋ ಬಜೆಟ್ ಸಿನೆಮಾ ಸೃಜನಾತ್ಮಕವಾಗಿದ್ದಾಗ ಕನ್ನಡ ಭಾಷೆ  ಮತ್ತು ಮನಸ್ಸುಗಳನ್ನು ಕಟ್ಟಿಕೊಡೋದಕ್ಕೆ ಸಾಧ್ಯ ಇದೆ.

*ವಸಂತ ಶೆಟ್ಟಿ ಬೆಳ್ಳಾರೆ : ದೆಹಲಿ ಕರ್ನಾಟಕ ಸಂಘದ ಕನ್ನಡ ಭಾರತಿ ಪ್ರಶಸ್ತಿಯ ಆಯ್ಕೆ ಸಮಿತಿಯಲ್ಲಿದ್ದು ನೀವು ಕಲಾವಿದೆ ಸರೋಜಿನಿ ಶೆಟ್ಟಿ ಅವರನ್ನು ಆಯ್ಕೆ ಮಾಡಿರುವುದು ನಮಗೆ ಸಂತೋಷದ ವಿಚಾರವಾಗಿದೆ. ರಂಗಭೂಮಿ ಮತ್ತು ಕನ್ನಡ ಭಾರತಿ ಯಾವ ರೀತಿಯಲ್ಲಿ ನಿಮ್ಮ ಬದುಕಿನಲ್ಲಿ ಪ್ರಭಾವ ಬೀರಿದೆ?*

ನನ್ನ ಯೌವ್ವನದ ಮೊದಲ ಘಟ್ಟಗಳಲ್ಲೇ ರಂಗಭೂಮಿಯ ಜೀನಿಯಸ್ ಬಿ.ವಿ.ಕಾರಂತ ಅವರ ಜೊತೆ ಕೆಲಸ ಪ್ರಾರಂಭ ಮಾಡಿದ್ದೆ. 1970ರಿಂದ ಇವತ್ತಿನವರೆಗೂ ರಂಗಭೂಮಿಯಲ್ಲಿ ಕಾರಂತರ ಮತ್ತು ಅವರ ನಾಟಕಗಳ ನಂಟಿನಲ್ಲಿ ಬೆಳೆಯುತ್ತಾ, ಕಲಿಯುತ್ತಾ ಬಂದಿದ್ದೇನೆ. ನನಗೆ ರಂಗಭೂಮಿ ಕೊಟ್ಟಷ್ಟು ಯಾವ ವಿದ್ಯಾಲಯವೂ ಕೊಟ್ಟಿಲ್ಲ. ಅದಕ್ಕೆ ರಂಗಭೂಮಿ ವಿಶ್ವವಿದ್ಯಾಲಯ. ಅಂತಹ ವಿಶ್ವವಿದ್ಯಾಲಯದಲ್ಲಿ ಇನ್ನೂ ಅಭ್ಯಾಸ ಮಾಡುತ್ತಿರುವವನು. ಹಾಗಾಗಿ ನೀವು ಕನ್ನಡ ಭಾರತಿ ಪ್ರಶಸ್ತಿಯನ್ನು ಕೊಡುತ್ತಿದ್ದೀರಿ ಎಂದು ಹೇಳಿದ ಕೂಡಲೇ ಎಂತಹ ಮೈ ರೋಮಾಂಚನವಾಯಿತು. ದೆಹಲಿಯಲ್ಲಿ ಆ ಪ್ರಶಸ್ತಿ ಸಿಕ್ಕಾಗ ನಮಗೆ ರಾಷ್ಟ್ರಮಟ್ಟದ ಪ್ರಶಸ್ತಿಯ ತರ ಅನಿಸಿಬಿಡುತ್ತದೆ. ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿಯ ಜತೆ ನನ್ನ ಒಡನಾಟ ಬಹಳ ಪುರಾತನವಾದುದು. ಕಾರಂತರು ಇಲ್ಲಿ ಎನ್.ಎಸ್.ಡಿ.ನಲ್ಲಿದ್ದಾಗ ಬರುತ್ತಿದ್ದೆ. ಆಗ ಸಂಘದ ಬೆಳವಣಿಗೆಯನ್ನು ಒಟ್ಟಾರೆಯಾಗಿ ನೋಡಿದ್ದೇನೆ. ಇಂದು ತನ್ನದೇ ಆದ ಒಂದು ಜಾಗದ ಮುಖಾಂತರ ನಡೆಯುವ ಯಶಸ್ವೀ ಯೋಜನೆಗಳನ್ನು ನೋಡುತ್ತಿರುವಾಗ ಕನ್ನಡಿಗರಿಗೆ ನಿಜವಾಗಿಯೂ ಬೇಕಾಗಿದ್ದ ಒಂದು ನೆಲೆಯನ್ನು ಅವರು ಇಲ್ಲಿ ಕಂಡುಕೊಂಡಿದ್ದಾರೆ ಎಂದನಿಸುತ್ತದೆ. ಸಂಘಕ್ಕೆ ಇರುವ ಇತಿಹಾಸವನ್ನು ನಾವು ಸುಮ್ಮನೆ ನೆನೆಸಿಕೊಂಡರೆ ಸಾಕು, ಮೈಯೆಲ್ಲಾ ಜುಮ್ಮೆನಿಸುತ್ತದೆ. ಅಂತಹ ಇತಿಹಾಸವಿರುವಂತಹ ಸಂಘದ ಜೊತೆಯಲ್ಲಿ ನನ್ನ ಹಲವು ನೆನಪುಗಳಿವೆ ಎನ್ನುವುದೇ ನನಗೆ ಖುಷಿ. ನಾನು ಕಾರಂತರ ಎರಡು ಮೂರು ನಾಟಕಗಳನ್ನು ಇಲ್ಲಿ ಪ್ರದರ್ಶನ ಮಾಡಿದ್ದೇನೆ. ಸತತವಾಗಿ ಕಾರ್ಯಕ್ರಮಗಳಿಗೆ, ಸೆಮಿನಾರ್‌ಗಳಿಗೆ ಬಂದಿದ್ದೇನೆ. ನನ್ನ ಚಲನಚಿತ್ರಗಳನ್ನು ಇಲ್ಲಿ ತೋರಿಸಿದ್ದೇನೆ. ನನ್ನ ಸಾಂಸ್ಕೃತಿಕವಾದ ಬದುಕಿನಲ್ಲಿ ಸಂಘ ಬಹಳ ಒಂದು ಮುಖ್ಯಭಾಗವಾಗಿದೆ. ನನ್ನ ಪಯಣದಲ್ಲಿ ಅದು ನನ್ನ ಜೊತೆ ಇದೆ. ಇನ್ನು ರಂಗಭೂಮಿಯಿಲ್ಲದೇ ನನಗೆ ಇರಲು ಸಾಧ್ಯವಿಲ್ಲ. ಮನೆಯ ಟೆರೇಸ್ ಮೇಲೆ ಬಿ.ವಿ.ಕಾರಂತ ರಂಗ ಮನೆ ಎಂದು ಮಾಡಿದ್ದೇನೆ. ಬೆಂಗಳೂರಿನ ಹಲವು ತಂಡಗಳು ಅಲ್ಲಿ ರಿಹರ್ಸಲ್ ಮಾಡುತ್ತಾ ಇವೆ. ಇದು ನನ್ನ ಪರಿಧಿಯಲ್ಲಿ ನನಗೆ ಇರುವ ಇತಿಮಿತಿಯಲ್ಲಿ ರಂಗಭೂಮಿಯ ಸೇವೆ ಮಾಡುವ ಸಾಧ್ಯ ಆಗುತ್ತಾ ಇದೆ. ರಂಗಭೂಮಿಯ ಜೊತೆಯಲ್ಲಿ ಸದಾ ಬೆಳೆಯಲಿಕ್ಕೆ ಇಷ್ಟಪಡುತ್ತೇನೆ. ಅದು ನನ್ನ ಬಾಳಿನ ಅವಿಭಾಜ್ಯ ಅಂಗ.

*ವಸಂತ ಶೆಟ್ಟಿ ಬೆಳ್ಳಾರೆ : ಹೊರನಾಡಿನ ಬಹುತೇಕ ಕನ್ನಡಿಗರನ್ನು ನೋಡಿದ ನಿಮಗೆ ದೆಹಲಿಯ ಕನ್ನಡಿಗರು ಹೇಗೆ ಭಿನ್ನವಾಗಿ ಕಾಣುತ್ತಾರೆ?*

ಪ್ರತಿಯೊಂದು ಕನ್ನಡ ಸಂಘದ ಚಟುವಟಿಕೆಗಳನ್ನು ನೋಡಿದ್ದೇನೆ, ಭಾಗವಹಿಸಿದ್ದೇನೆ, ಬಹಳಷ್ಟು ಖುಷಿಯಾಗುವುದೇನೆಂದರೆ ಅಮೇರಿಕಾ ಅಲ್ಲೆಲ್ಲಾ ಸುತ್ತಿದಾಗಲೂ ಕೂಡಾ ಅಲ್ಲೆಲ್ಲಾ ಕನ್ನಡ ಸಂಘಗಳ ಜೊತೆ ಕೆಲಸ ಮಾಡಿದ್ದೇನೆ. ಒಂದು ಇಡೀ ಸಮುದಾಯ ತನ್ನ ಭಾಷೆ ಮತು ಸಂಸ್ಕೃತಿಯನ್ನು ತನ್ನದಲ್ಲದ ನೆಲದಲ್ಲಿ ಉಳಿಸಿಕೊಳ್ಳುವುದು ಬಹಳ ಕಷ್ಟದ ಕೆಲಸ. ಅದಕ್ಕಾಗಿ ಒಂದು ಮನೋಸಿದ್ಧತೆಯನ್ನು ಕಟ್ಟಿಕೊಡುತ್ತಾ ಹೋಗಬೇಕಾಗುತ್ತದೆ. ಕರ್ನಾಟಕದಲ್ಲಿಯೋ, ಬೆಂಗಳೂರಿನಲ್ಲಿಯೋ ಇಲ್ಲೇ ಇದ್ದು ಕೆಲಸ ಮಾಡುವವರಿಗೆ ಸುತ್ತ ಪರಿಸರ ಒಂದೇ ಇರುತ್ತದೆ. ಆದರೆ ಇಲ್ಲಿ ಅಂತಹ ಪರಿಸರವನ್ನು ನಿರ್ಮಾಣಮಾಡಿಕೊಂಡು ಅದರ ಮುಖಾಂತರ ತಮ್ಮನ್ನು ತಾವು ಸ್ಥಾಪಿಸಿಕೊಳ್ಳುತ್ತಾ ತಮ್ಮ ಇರುವಿನ ಹಂಗಿನ ಜೊತೆಯಲ್ಲೂ ಇರುವುದು ದೊಡ್ಡ ಕೆಲಸ. ಕರ್ನಾಟಕದಲ್ಲಿರುವ ಕನ್ನಡಿಗರಿಗಿಂತ ಹೊರನಾಡ ಕನ್ನಡಿಗರ ಸಾಧನೆ ನಿಜವಾಗಿಯೂ ಅದ್ಭುತವಾದುದು. ದೆಹಲಿ ಕರ್ನಾಟಕ ಸಂಘವು ಯೋಜನಾಬದ್ಧವಾಗಿ ಮಾಡುತ್ತಿರುವ ಕೆಲಸ ಇತರರಿಗೆ ಮಾದರಿಯಾಗಿದೆ. ಹೊರನಾಡ ಕನ್ನಡಿಗರು ಹಾಗೂ ಹೊರದೇಶದ ಕನ್ನಡಿಗರು ನಮಗೆ ಒಂದು ರೀತಿಯ ಮಾಡೆಲ್‌ಗಳಾಗಿದ್ದಾರೆ. ಆ ಮಾದರಿ ಇನ್ನೂ ವರ್ಧಿಸಲಿ. ಅ




### 'ಈವರೆಗೆ ಕೇಳದ, ಕಾಣದವರನ್ನು ಕೂಡಾ ಫೇಸ್‌ಬುಕ್‌ನಲ್ಲಿ ದ್ವೇಷಿಸಲಾಗುತ್ತಿದೆ'

# ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಬೊಳುವಾರು ಮಹಮದ್ ಕುಂಞಿ

ಕೇಂದ್ರ ಸಾಹಿತ್ಯ ಅಕಾಡೆಮಿಯ ಪರಂಪರೆಯಲ್ಲೇ ಮೊತ್ತ ಮೊದಲ ಬಾರಿಗೆ ತಮ್ಮ ಸೃಜನಶೀಲ ಕೃತಿಗಳಿಗಾಗಿ ಎರಡು ಬಾರಿ ಪ್ರಶಸ್ತಿಗಳನ್ನು ಪಡೆದು ರಾಷ್ಟ್ರೀಯ ದಾಖಲೆ ನಿರ್ಮಿಸಿದ ಶ್ರೀ ಬೊಳುವಾರು ಮಹಮದ್ ಕುಂಞಿ ಅವರು ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳು ಮತ್ತು ಸದಸ್ಯರುಗಳ ಜೊತೆಗೆ ಇದೇ ಫೆಬ್ರವರಿ 24ರಂದು 'ಪರಸ್ಪರ' ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅವರ "ಸ್ವಾತಂತ್ರ್ಯದ ಓಟ" ಎಂಬ 1086 ಪುಟಗಳ ಸುದೀರ್ಘವಾದ ಕಾದಂಬರಿಗೆ 2016ರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದೆ.

ದೆಹಲಿ ಕರ್ನಾಟಕ ಸಂಘದಲ್ಲಿ ಶ್ರೀ ಬೊಳುವಾರು ಹಾಗೂ ಅವರ ಪತ್ನಿ ಶ್ರೀಮತಿ ಜುಬೇದಾರನ್ನು ಶಾಲು ಹೊದಿಸಿ, ಸ್ಮರಣಿಕೆ ಹಾಗೂ ಪುಷ್ಪಗುಚ್ಛ ನೀಡಿ ಅಭಿನಂದಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ನಡೆದ ಮಾತುಕತೆಯಲ್ಲಿ ಬೊಳುವಾರು ಅವರು ತಮ್ಮ ಕಾದಂಬರಿಯ ಸಂಕ್ಷಿಪ್ತ ವಿವರಣೆ ನೀಡುವುದರ ಜೊತೆಗೆ ದೇಶದಾದ್ಯಂತ ಪ್ರಸ್ತುತ ಸಮಾಜದಲ್ಲಿ ನಡೆಯುತ್ತಿರುವ ಹಲವಾರು ಸಾಮಾಜಿಕ, ರಾಜಕೀಯ ಮತ್ತು ಧಾರ್ಮಿಕ ತಳಮಳಗಳ ಬಗ್ಗೆ ಪ್ರಸ್ತಾಪಿಸುತ್ತಾ 'ಸ್ವತಂತ್ರ ಭಾರತದಲ್ಲಿ ಇಂದೂ ಕೂಡಾ ಹಿಂದೂಗಳು ಮತ್ತು ಮುಸ್ಲಿಮರು ಪರಸ್ಪರರನ್ನು ವಿಶ್ವಾಸದಿಂದ ಪ್ರೀತಿಸಿ, ಗೌರವದಿಂದ ಸಹಬಾಳ್ವೆಯನ್ನು ನಡೆಸುವುದರ ಬದಲಾಗಿ ಒಂದು ರೀತಿಯ ಸಂಶಯ–ಭಯದ ಗೋಡೆ–ಕಂದರ ಈ ಎರಡು ಸಮುದಾಯಗಳ ನಡುವೆ ಏರ್ಪಟ್ಟಿರುವುದರ ಬಗ್ಗೆ ತಮ್ಮ ವಿಷಾದ ವ್ಯಕ್ತಪಡಿಸಿದರು'. ಇಂದು ಮನುಷ್ಯ ಪ್ರೀತಿಸುವುದನ್ನು ಮರೆತಿದ್ದಾನೆ. ಆದರೆ ಫೇಸ್‌ಬುಕ್‌ನಂತಹ ಸಾಮಾಜಿಕ ಜಾಲತಾಣಗಳ ಮೂಲಕ ದ್ವೇಷ ಮಾತ್ರ ಅತಿ ಸುಲಭದಲ್ಲಿ ಪಸರಿಸುತ್ತಿದೆ. ನೀವು ಈವರೆಗೆ ಕೇಳದ, ಕಾಣದವರನ್ನು ಕೂಡಾ ಇದರಲ್ಲಿ ದ್ವೇಷಿಸಲಾಗುತ್ತಿದೆ. ಅದು ಯಾಕೆ ಎಂಬುದು ಯಾರಿಗೂ ಗೊತ್ತಿಲ್ಲ. ದ್ವೇಷದ ಬದಲು ಅವರನ್ನು ಪ್ರೀತಿಸಲು ಸಾಧ್ಯವಿಲ್ಲವೇ ಎಂದು ಬೊಳುವಾರು ಮಾರ್ಮಿಕವಾಗಿ ಪ್ರಶ್ನಿಸಿದರು.

ಪದವಿ ಶಿಕ್ಷಣದ ಬಳಿಕ ಸಿಂಡಿಕೇಟ್ ಬ್ಯಾಂಕಿನಲ್ಲಿ ದೊರೆತ ನೌಕರಿ, ಅಲ್ಲಿ ತಾನು ಕತೆ ಬರೆಯತೊಡಗಿದ್ದು, 1977ರಲ್ಲಿ ಮದುವೆಯಾದ ಮರುದಿನವೇ ಬಡ್ತಿಯೊಂದಿಗೆ ಮಣಿಪಾಲಕ್ಕೆ ವರ್ಗಾವಣೆಗೊಂಡು ಉಡುಪಿಗೆ ಬಂದು ನೆಲೆಸಿದ್ದನ್ನು ಅವರು ನೆನೆದರು. ಅವರ ಕೃತಿಗಳನ್ನು ಬಹಳ ಶ್ರದ್ಧೆಯಿಂದ ಓದಿಕೊಂಡಿರುವ ಶ್ರೀಮತಿ ನಂದಿನಿ ಮಲ್ಯ ಕಾದಂಬರಿಯ ಮುಖ್ಯ ಪಾತ್ರಧಾರಿ ಚಾಂದ್ ಅಲೀ ಬಗ್ಗೆ ನೆನಪಿಸಿಕೊಳ್ಳುತ್ತ ಭಾವುಕರಾದಾಗ ಶ್ರೀ ಬೊಳುವಾರು ಅವರ ಕಣ್ಣುಗಳೂ ಕೂಡಾ ಒದ್ದೆಯಾದವು. ಅದೇ ರೀತಿ ದೆಹಲಿಯ ಹಲವು ಕನ್ನಡಿಗರು ಅವರ ಕೃತಿಗೆ ಸಂಬಂಧಪಟ್ಟಂತೆ ವಿವಿಧ ವಿಚಾರಗಳ ಬಗ್ಗೆ ಅವರ ಜೊತೆ ಚರ್ಚಿಸಿದರು. ಮುಂದಿನ ಯೋಜನೆಯಾಗಿ ಇನ್ನೂ ಎರಡು ಒಳ್ಳೆಯ ಕಾದಂಬರಿಗಳನ್ನು ಬರೆಯಬೇಕೆನ್ನುವ ಯೋಚನೆ ಇದೆ ಎಂದು ಬೊಳುವಾರು ತಿಳಿಸಿದರು. ಅವರ ಇನ್ನೊಂದು ಸೃಜನಾತ್ಮಕ ಕೃತಿ "ಓದಿರಿ" ಅದರ ಬಗ್ಗೆ ಕೂಡಾ ಪ್ರಸ್ತಾಪಿಸಿ ಚರ್ಚಿಸಲಾಯಿತು. ಪ್ರವಾದಿ ಮಹಮದ್ ರ ಕುರಿತಾಗಿ ಬರೆದಿರುವ ಒಂದು ಸೃಜನಶೀಲ ಕೃತಿ ಇದಾಗಿದೆ ಎಂದು ಹಲವಾರು ಸಭಿಕರು ಅಭಿಪ್ರಾಯ ವ್ಯಕ್ತಪಡಿಸಿದರು. ಕನ್ನಡದ ಸೃಜನಶೀಲ ಗದ್ಯ ಸಾಹಿತ್ಯಕ್ಕೆ ಮುಸ್ಲಿಮ್ ಬದುಕನ್ನು ಮೊತ್ತ ಮೊದಲಬಾರಿಗೆ ಪರಿಚಯಿಸಿದ ಕರಾವಳಿ ಕರ್ನಾಟಕದ ಬೊಳುವಾರು ಮಹಮದ್ ಕುಂಞಿ (1951) ಸುಮಾರು ಇನ್ನೂರಕ್ಕೂ ಮಿಕ್ಕಿ ಕತೆಗಳಲ್ಲದೆ, ಕಾದಂಬರಿ, ನಾಟಕ, ಪ್ರವಾಸ ಕಥನ, ಅನುವಾದ ಸಾಹಿತ್ಯ ಹಾಗೂ ಮಕ್ಕಳ ಸಾಹಿತ್ಯಗಳನ್ನು ರಚಿಸಿದ್ದಾರೆ.

ಕನ್ನಡದ ಮಕ್ಕಳ ಸಾಹಿತ್ಯಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಮೊತ್ತಮೊದಲ ಪ್ರಶಸ್ತಿಯನ್ನು ತಂದುಕೊಟ್ಟ ದಾಖಲೆಗೂ ಇವರೇ ಪಾತ್ರರು. ಇವರು ಸಂಪಾದಿಸಿದ 'ತಟ್ಟು ಚಪ್ಪಾಳೆ ಪುಟ್ಟ ಮಗು' ಎಂಬ ಮಕ್ಕಳ ಪದ್ಯಗಳ ಸಂಕಲನದಿಂದಾಗಿ ಇವರು ಕನ್ನಡ ಮಕ್ಕಳ ಸಾಹಿತ್ಯದಲ್ಲೂ ಗಟ್ಟಿ ಜಾಗ ಪಡೆದಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸಿದ ಇವರ 'ಪಾಪು ಗಾಂಧಿ ಗಾಂಧಿ ಬಾಪು' ಆದ ಕತೆ (ಇದು ಪ್ರಕಟವಾದ ಎರಡು ವರ್ಷಗಳಲ್ಲಿ ನಾಲ್ಕು ಮುದ್ರಣ ಕಂಡಿದೆ) ಕನ್ನಡದ ಮಕ್ಕಳಿಗೆ ಮಹಾತ್ಮ ಗಾಂಧಿಯನ್ನು ಹೊಸದಾಗಿ ಪರಿಚಯಿಸಿದೆ.ಈ ಕೃತಿ 2010ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಗಳಿಸಿದೆ.

ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಮೂರು ಬಾರಿ ಗೌರವ ಪ್ರಶಸ್ತಿ ಹಾಗೂ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳಿಂದಲೂ ಸನ್ಮಾನಿತರಾಗಿದ್ದಾರೆ.

ಇವರಿಗೆ ಗೌರವ ತಂದಿರುವ ಇತರ ಪ್ರಶಸ್ತಿಗಳಲ್ಲಿ ಮುಖ್ಯವಾಗಿ ಕೋಲ್ಕತ್ತಾದ ಭಾರತೀಯ ಭಾಷಾ ಸಂಸ್ಥಾನ ಪ್ರಶಸ್ತಿ, ದೆಹಲಿಯ ಕಥಾ ಪ್ರಶಸ್ತಿ, ಶಿವರಾಮ ಕಾರಂತ ಪ್ರಶಸ್ತಿ, ಬಸವರಾಜ ಕಟ್ಟೀಮನಿ ಪ್ರಶಸ್ತಿ, ವಿಶುಕುಮಾರ್ ಪ್ರಶಸ್ತಿ, ಚಡಗ ಪ್ರಶಸ್ತಿ, ಪರಶುರಾಮ ಪ್ರಶಸ್ತಿ, ಅಬುದಾಬಿಯ ಬಿಎಮ್‌ಎಫ್ ಗೌರವಗಳು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆಯವರು ಬೊಳುವಾರು ಅವರು ದೆಹಲಿಯಲ್ಲಿದ್ದಾಗ ಸಂಘದ ಜೊತೆಗೆ ಅವರ ಆತ್ಮೀಯ ಒಡನಾಟವನ್ನು ನೆನಪಿಸಿ, ಮುಂದೆ ಕನ್ನಡದ ಸಾರಸತ್ವಲೋಕಕ್ಕೆ ಬೊಳುವಾರು ಇನ್ನೂ ಹೆಚ್ಚು ಕೃತಿಗಳನ್ನು ನೀಡುವಂತಾಗಲಿ ಎಂದು ಹಾರೈಸಿದರು. ಕಾರ್ಯಕ್ರಮವನ್ನು ಸಾಂಸ್ಕೃತಿಕ ಸಮಿತಿಯ ಅಧ್ಯಕ್ಷ ಸಖಾರಾಮ ಉಪ್ಪೂರು ಅವರು ನಿರ್ವಹಿಸಿದರು.

**ಸಖಾರಾಮ ಉಪ್ಪೂರು**

# ಬೊಳುವಾರಿನ ಮಕ್ಕಳ ಜೊತೆ ಮಗುವಾದ ಬೊಳುವಾರು

ದೆಹಲಿಯ ಕರ್ನಾಟಕ ಸಂಘದಲ್ಲಿ ಒಂದು ದಿಢೀರ್ ಕಾರ್ಯಕ್ರಮ–ಪುತ್ತೂರು ಬೊಳುವಾರಿನ ಸುದಾನ ವಸತಿ ಶಾಲೆಯ ಭಾರತ್ ಸ್ಕೌಟ್ ಮತ್ತು ಗೈಡ್ಸ್‌ನ 'ನ್ಯಾಶನಲ್ ಗೋಲ್ಡನ್ ಏರೋ' ರಾಷ್ಟ್ರ ಪ್ರಶಸ್ತಿ ಪಡೆದ ಮಕ್ಕಳಿಗಾಗಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಎರಡನೆಯ ಬಾರಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಬೊಳುವಾರು ಮಹಮದ್ ಕುಂಞಿಯವರ ಜೊತೆ ಸಂಘದ ಸೆಮಿನಾರ್ ಹಾಲ್ ನಲ್ಲಿ ನಡೆಸಿದ ಸಂವಾದ ಕಾರ್ಯಕ್ರಮ.

ಶಾಲೆಯ ಪಠ್ಯಪುಸ್ತಕದಲ್ಲಿ ಬೊಳುವಾರರ ಕಥೆಗಳನ್ನು ಓದಿದ ಮಕ್ಕಳಿಗೆ ಅವರ ಜೊತೆ ನೇರ ಸಂಭಾಷಣೆ ಖುಷಿ ಆದರೆ, ಬೊಳುವಾರರಿಗೆ ಆತಂಕ. ಮಕ್ಕಳ ಜೊತೆ ಮಾತಾಡೋದು ಕಷ್ಟ ಮಾರಾಯ್ರೇ, ಅವರ ಮನಸ್ಸು ಹಸಿ ಮಣ್ಣಿನ ಗೋಡೆಯ ಹಾಗೆ. ಎಂದು ಹೇಳುತ್ತಲೇ ಮಕ್ಕಳ ಕುರಿತು ಹಿರಿಯರ ಜವಾಬ್ದಾರಿಯನ್ನು ಚೆನ್ನಾಗಿಯೇ ನಿಭಾಯಿಸಿದ ಬೊಳುವಾರು ಚಪ್ಪಾಳೆ ತಟ್ಟುವ ಪುಟ್ಟ ಮಕ್ಕಳೊಡನೆ ನಡೆಸಿದ ಸರಳ ಸಂವಾದದಲ್ಲಿ ಎರಡು ಗಂಟೆ ಹೋದದ್ದೇ ತಿಳಿಯಲಿಲ್ಲ. 'ಸುಳ್ಳು ಹೇಳಬಾರದು' ಎಂಬಲ್ಲಿಂದ ಆರಂಭವಾದ ಮಾತುಕತೆ, ಮಕ್ಕಳಿಗೆ ಅರ್ಥವಾಗುವ ರೀತಿಯಲ್ಲಿ ಹಲವಾರು ವಿಷಯಗಳನ್ನು ಪ್ರಸ್ತುತ ಪಡಿಸುತ್ತ ಮಕ್ಕಳನ್ನು ಚಿಂತನೆಗೆ ಹಚ್ಚಿದ ರೀತಿ ಸೊಗಸಾಗಿತ್ತು.

ಸಂವಾದಕ್ಕೊಂದು ವಿಷಯ ವಸ್ತು ಇಲ್ಲದುದರಿಂದಲೇ, ಈ ಅರ್ಥಪೂರ್ಣ ಹರಟೆಯಲ್ಲಿ ಎಲ್ಲರಿಗೂ ಪ್ರಶ್ನೆಗಳನ್ನು ಕೇಳುವ ಹಾಗೂ ಅವುಗಳಿಗೆ ಉತ್ತರ ಪಡೆದು, ತಮ್ಮಲ್ಲಿ ಮೂಡುವ ಹೊಸ ಪ್ರಶ್ನೆಗಳಿಗೆ ತಾವೇ ಉತ್ತರ ಹುಡುಕಿಕೊಳ್ಳುವಂತೆ 'ಚಿಂತನಾ ಅಡಿಪಾಯ' ಹಾಕಿರುವುದು 'ಬೊಳುವಾರು ಕಲೆ'ಯ ವಿಶೇಷ.

ಸೂಕ್ತಾ ರೈ, ಜೋಶಿತಾ, ಲಾಸ್ಯ, ವಿನೀತಾ, ನಮ್ರತಾ, ಮನ್ವಿತ್, ಪ್ರದ್ಯುಮ್ನ, ಆದಿತ್ಯರಾಮ, ಚರ್ಚೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಅಧ್ಯಾಪಕಿಯರಾದ ಪ್ರೇಮಲತಾ ಮತ್ತು ರೇಖಾ ಮಕ್ಕಳ ಜೊತೆಗಿನ ಚರ್ಚೆಯಲ್ಲಿ ಭಾಗವಹಿಸಿ, ಮಕ್ಕಳಿಗೆ ನೆರವಾದರು. ಲತಾ ಅಮರನಾಥ್ ದೀಪಾ ಸತೀಶ್, ಜ್ಯೋತಿ ಮಕ್ಕಳ ಜೊತೆಗಿದ್ದು, ಸಂವಾದದಲ್ಲಿ ಭಾಗವಹಿಸಿದರು.



ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರ ನೇತೃತ್ವದಲ್ಲಿ ನಡೆದ ಈ ಸುಂದರ ಕಾರ್ಯಕ್ರಮ ಪ್ರಶಸ್ತಿ ಪಡೆಯಲು ಬಂದ ಮಕ್ಕಳಿಗೆ ಸಿಕ್ಕಿದ ಬೌದ್ಧಿಕ ಬಹುಮಾನ. ಪಠ್ಯ ಪುಸ್ತಕದಲ್ಲಿರುವ ಬೊಳುವಾರರ ಜೊತೆ ನಾವು ದೂರದ ದೆಹಲಿಯಲ್ಲಿ ಮಾತನಾಡಿದ್ದೇವೆ ಎಂದು ಹೆಮ್ಮೆಯಿಂದ ಹೇಳುವ ಅವಕಾಶವೂ ಹೌದು.

***ಸರವು ಕೃಷ್ಣ ಭಟ್***

# ಸಂಗೀತದಿಂದ ಮನಸ್ಸು-ಆರೋಗ್ಯ ಸದೃಢ : ಸ್ವಾಮಿ ಕೃಷ್ಣ ಸಹಾ ವಿದ್ಯಾರ್ಥಿ ಮಹಾರಾಜ್

'ಭಕ್ತಿಯಿಂದ ಸಶಕ್ತ ಮನಸ್ಸು ಹಾಗೂ ಆರೋಗ್ಯವಂತ ಜೀವನ ನಮ್ಮದಾಗಿಸಿಕೊಳ್ಳಬಹುದು. ಅನಾರೋಗ್ಯವಂತನನ್ನೂ ಸಂಗೀತ ಸದೃಢನನ್ನಾಗಿ ಮಾಡುತ್ತದೆ' ಎಂದು ನವದೆಹಲಿಯ ರಾಷ್ಟ್ರೀಯ ಭಗವಾನ್ ವಾಲ್ಮೀಕಿ ಮಂದಿರದ ಸ್ವಾಮಿ ಕೃಷ್ಣ ಸಹಾ ವಿದ್ಯಾರ್ಥಿ ಮಹಾರಾಜ್ ತಿಳಿಸಿದರು.

ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಇದೇ ಫೆಬ್ರವರಿ 19ರಂದು ಶ್ರೀಮತಿ ಜಯಶ್ರೀ ಬಸವರಾಜ್ ಹಾಗೂ ಶ್ರೀ ಬಿ.ಕೆ. ಬಸವರಾಜು ಅವರ ಸುಪುತ್ರ ಚಿ. ಚಿರಾಗ್ ಅವರ 18ನೇ ವರ್ಷದ ಅಂಗವಾಗಿ ಹಮ್ಮಿಕೊಂಡಿದ್ದ 'ಹರಿದಾಸ ಸಂಗೀತೋತ್ಸವ' ಹಾಗೂ 'ತಿಳಿ ಹಾಸ್ಯದೊಂದಿಗೆ ಆರೋಗ್ಯ' ಎಂಬ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದ ಅವರು, ಪಾಶ್ಚಾತ್ಯ ಸಂಸ್ಕೃತಿಯನ್ನು ಬದಿಗಿರಿಸಿ, ಸಂಗೀತ ಹಾಗೂ ಹಾಸ್ಯದಂತಹ ಕಾರ್ಯಕ್ರಮದ ಮೂಲಕ ವಿಶಿಷ್ಟ ರೀತಿಯಲ್ಲಿ ಜನ್ಮದಿನವನ್ನು ಆಚರಿಸುತ್ತಿರುವುದು ಮಾದರಿಯಾಗಿದೆ ಎಂದರು.

ಕಾಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಆಯುಷ್ ಮಂತ್ರಾಲಯದ ಮಾಜಿ ಉಪಾಧ್ಯಕ್ಷ ಡಾ. ಜಯಪ್ರಕಾಶ ನಾರಾಯಣ ಮಾತನಾಡುತ್ತಾ ಪ್ರತಿಯೊಬ್ಬರು ಯಶಸ್ಸನ್ನು ಗಳಿಸಬೇಕು ಎಂಬ ಮಹದಾಸೆ ಹೊಂದಿರುತ್ತಾರೆ. ಯಶಸ್ಸನ್ನು ಸಾಧಿಸಬೇಕಾದರೆ ನಿದ್ರೆ, ಭಯ, ಕ್ರೋಧ, ಆಲಸ್ಯ ಇಂತಹ ಆರು ಶತ್ರುಗಳನ್ನು ದೂರ ಇಡಬೇಕೆಂದು ಅತ್ಯಂತ ಮಾರ್ಮಿಕವಾಗಿ ವಿವರಿಸಿದರು.

ನ್ಯಾಯವಾದಿ ಡಾ. ಉದಯಕುಮಾರ ದೇಸಾಯಿ, ಜನಪ್ರಿಯ ಗಾಯಕರಾದ ಶ್ರೀಮತಿ ಸಂಗೀತ ಕಟ್ಟಿ, ಶ್ರೀ ಅನಂತ ಕುಲಕರ್ಣಿ, ತಿಳಿಹಾಸ್ಯದ ಕಲಾವಿದರಾದ ಡಾ. ಕೆ.ಪಿ. ಪುತ್ತುರಾಯ, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಉಪಸ್ಥಿತರಿದ್ದರು.

ಹೆಸರಾಂತ ಗಾಯಕರಾದ ಶ್ರೀಮತಿ ಸಂಗೀತ ಕಟ್ಟಿ ಹಾಗೂ ಶ್ರೀ ಅನಂತ ಕುಲಕರ್ಣಿ ತಂಡದವರು ನಡೆಸಿಕೊಟ್ಟ ಸಂಗೀತ ಕಾರ್ಯಕ್ರಮ ದೆಹಲಿಯ ಕನ್ನಡಿಗರ ಕಣ್ಮನ ಸೂರೆಗೊಂಡಿತು





ಡಾ. ಕೆ.ಪಿ. ಪುತ್ತುರಾಯ ಅವರ ತಿಳಿ ಹಾಸ್ಯದೊಂದಿಗೆ ಆರೋಗ್ಯ ಮತ್ತು ಆನಂದ ಕಾರ್ಯಕ್ರಮ ನೆರೆದ ಸಭಿಕರನ್ನು ನಗೆಗಡಲಿನಲ್ಲಿ ಮುಳುಗಿಸಿತು. ಶ್ರೀ ಚಂದ್ರಶೇಖರ್ ಅವರು ಕಾರ್ಯಕ್ರಮ ನಿರೂಪಿಸಿದರು.

***ಹರಿಪ್ರಿಯ ಎಸ್.***

# ಗಾಯನದ ಗುಂಗು ಹಿಡಿಸಿದ ದಾಸವಾಣಿ ಮತ್ತು ವಚನಗಳು

ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಇದೇ ಫೆಬ್ರವರಿ 5ರಂದು ಗಾಯಕ ಶ್ರೀ ಪ್ರಸನ್ನ ವೆಂಕಟೇಶ್ ಕೊರ್ತಿ, ಗುಲ್ಬರ್ಗಾ ಇವರು ನೀಡಿದ ದಾಸವಾಣಿ ಹಾಗೂ ವಚನಗಾಯನ ಕಾರ್ಯಕ್ರಮ ಕೇಳುಗರಲ್ಲಿ ಗಾಯನದ ಗುಂಗು ಹುಟ್ಟುಸಿದ್ದು ಕೇಳುಗರ ಮುಖದಲ್ಲಿ ವ್ಯಕ್ತವಾಗುತ್ತಿತ್ತು. ಈ ಕಾರ್ಯಕ್ರಮ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರಕಾರದ ಸಹಾಯದಿಂದ, ದೆಹಲಿ ಕರ್ನಾಟಕ ಸಂಘ ಹಾಗೂ ಮಧ್ವ ಸಂಘ ದೆಹಲಿ ಇವರ ಸಂಯುಕ್ತ ಆಯೋಜನೆಯಾಗಿತ್ತು.

ಉತ್ತರ ಕರ್ನಾಟಕದ ಆಡು ಭಾಷೆಯಲ್ಲಿ ರಚಿತಗೊಂಡ ಕೆಲವು ಹಾಡುಗಳನ್ನು ಪ್ರಸ್ತುತ ಪಡಿಸಿದ್ದು ಈ ಗಾಯನ ಕಾರ್ಯಕ್ರಮದ ವಿಶೇಷತೆಯಾಗಿತ್ತು. ತಮ್ಮ ಜನಪ್ರಿಯ ಹಾಡುಗಳಾದ "ತಾನೇ ಗೋಕುಲಕ್ಕೆ ಬಂದ ಶಿವ ಭಾವ ಭಯ ಹರ", "ಇವನ ಹಿಡಿದು ಕೊಂಡು ಹೋಗೆಲೋ ಜೋಗಿ", "ತಡಾ ಮಾಡದಲೇ ಬಿಡಾದಿ ಜಪಿಸೋ" ಹಾಗೂ "ಪವಮಾನ.. ಪವಮಾನ" ಪ್ರಸ್ತುತ ಪಡಿಸಿ ಗಾಯಕರು ಕೇಳುಗರಲ್ಲಿ ಗಾಯನದ ಗುಂಗು ಹುಟ್ಟಿಸುವಲ್ಲಿ ಯಶಸ್ವಿಯಾದರು.

ಪ್ರಸನ್ನ ವೆಂಕಟೇಶ್ ಕೊರ್ತಿಯವರ ಗಾಯನಕ್ಕೆ ತಬಲಾ ಸಾಥಿಯಾಗಿ ಶ್ರೀ ಜಯತೀರ್ಥ ಆದ್ಯ, ಹಾರ್ಮೋನಿಯಂನಲ್ಲಿ ಶ್ರೀ ಪಾರಸ್ ಮಣಿ ಭಾರದ್ವಾಜ್ ಹಾಗೂ ತಾಳದಲ್ಲಿ ಶ್ರೀ ರಾಘವೇಂದ್ರ ಕುಲಕರ್ಣಿಯವರೂ ಸಹ ಉತ್ತಮ ಸಹಯೋಗ ನೀಡಿದರು.

ಪ್ರಾರಂಭದಲ್ಲಿ ಸಂಘದ ಜಂಟಿ ಕಾರ್ಯದರ್ಶಿ, ಶ್ರೀಮತಿ ಜಮುನಾ ಮಠದ ಕಲಾವಿದರು ಮತ್ತು ಸಭಿಕರನ್ನು ಸ್ವಾಗತಿಸಿದರೆ, ಮಧ್ವ ಸಂಘದ ಸಕ್ರಿಯ ಕಾರ್ಯಕರ್ತ ಹಾಗೂ ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ ಶ್ರೀ ಸಂಜೀವ ದೇಶಪಾಂಡೆಯವರು ಕಲಾವಿದರ ಪರಿಚಯ ಮಾಡಿಕೊಟ್ಟರು.

ಕಾರ್ಯಕ್ರಮದ ಕೊನೆಯಲ್ಲಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಮಧ್ವ ಸಂಘ ದೆಹಲಿಯ ಅಧ್ಯಕ್ಷರಾದ ಡಾ. ಮದುಸೂಧನ್ ರಾವ್ ಅವರು ಕಲಾವಿದರಿಗೆ ಪುಷ್ಪಗುಚ್ಛ ಮತ್ತು ಸಂಘದ ಸ್ಮರಣಿಕೆ ನೀಡಿ ಅಭಿನಂದಿಸಿದರು. ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಡಾ. ಎಂ.ಎಸ್. ಶಶಿಕುಮಾರ್ ವಂದಾರ್ಪಣೆ ಸಲ್ಲಿಸಿದರು. ಅ

***ಚೆನ್ನು ಎಸ್ ಮಠದ***




# ದೆಹಲಿಯಲ್ಲಿ ಯಕ್ಷಗಾನ ತಾಳಮದ್ದಳೆ

ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್, ದೆಹಲಿ ಘಟಕದ ವತಿಯಿಂದ ಫೆಬ್ರವರಿ 13, 2017ರಂದು ಸಂಜೆ ದೆಹಲಿ ಕರ್ನಾಟಕ ಸಂಘದಲ್ಲಿ ಯಕ್ಷಗಾನ ಕಲಾರಂಗ, ಉಡುಪಿ, ಇದರ ಕಲಾವಿದರಿಂದ 'ಪಂಚವಟಿ' ಯಕ್ಷಗಾನ ತಾಳಮದ್ದಳೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಘೋರ ಹಾಗೂ ಮಾಯಾ ಸೂರ್ಪನಖಿಯಾಗಿ ಶ್ರೀ ಸರ್ಪಂಗಳ ಈಶ್ವರ ಭಟ್ ಅವರು ನೆರೆದವರ ಮನಗೆದ್ದರೆ, ರಾಮನಾಗಿ ಪ್ರೊ. ಎಂ.ಎಲ್. ಸಾಮಗರು ಸಭಿಕರನ್ನು ರಾಮಾಯಣದ ಪಂಚವಟಿಗೆ ಕೊಂಡೊಯ್ದುರು. ಹಿಮ್ಮೇಳದಲ್ಲಿ ಭಾಗವತಿಕೆಯಲ್ಲಿ ಶ್ರೀ ರಮೇಶ್ ಭಟ್ ಪುತ್ತೂರು ಹಾಗೂ ಚೆಂಡೆ, ಮದ್ದಳೆಗಳು ಅತ್ಯಂತ ಪರಿಣಾಮಕಾರಿಯಾಗಿ ಇಡೀ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಲ್ಲಿ ಮುಖ್ಯ ಪಾತ್ರವಹಿಸಿದವು.

ಮುಮ್ಮೇಳದಲ್ಲಿ ಯಕ್ಷಗಾನದ ಹಿರಿಯ ಮತ್ತು ಸುಪ್ರಸಿದ್ಧ ಕಲಾವಿದರಾದ ಪ್ರೊ. ಎಂ.ಎಲ್. ಸಾಮಗ, ಶ್ರೀ ಸರ್ಪಂಗಳ ಈಶ್ವರ ಭಟ್, ಶ್ರೀ ನಾರಾಯಣ ಹೆಗ್ಡೆ, ಶ್ರೀ ಸದಾಶಿವ ಆಳ್ವ, ಶ್ರೀ ಪೃಥ್ವೀರಾಜ್ ಕವತ್ತಾರ್ ಹಾಗೂ ಹಿಮ್ಮೇಳದಲ್ಲಿ ಭಾಗವತರಾಗಿ ಶ್ರೀ ರಮೇಶ್ ಭಟ್ ಪುತ್ತೂರು, ಮದ್ದಳೆ ಮತ್ತು ಚಂಡೆಯಲ್ಲಿ ಶ್ರೀ ಅಕ್ಷಯ ಕುಮಾರ್ ಹಾಗೂ ಶ್ರೀ ಶ್ರೀಷ ಅವರು ಭಾಗವಹಿಸಿದ್ದರು.

ಇದೇ ತಂಡ ಫೆಬ್ರವರಿ 14ರಂದು ರಾಷ್ಟ್ರೀಯ ನಾಟಕ ಶಾಲೆ (ಎನ್.ಎಸ್.ಡಿ.)ಯಲ್ಲಿ 'ವಾಲಿವಧೆ' ಎಂಬ ತಾಳಮದ್ದಳೆಯನ್ನು ನಡೆಸಿಕೊಟ್ಟಿತು.

ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್, ದೆಹಲಿ ಘಟಕದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತನಾಡಿ ಸಮಾನ ಮನಸ್ಕ ಯಕ್ಷಗಾನದ ಸಂಘಟನೆಗಳು, ಸಂಘಟಕರು ಒಟ್ಟು ಸೇರಿ ಯಕ್ಷಗಾನದ ಕಾರ್ಯಕ್ರಮಗಳನ್ನು ಆಯೋಜಿಸಬೇಕು ಜೊತೆಗೆ ಒಗ್ಗಟ್ಟಾಗಿ ಯಕ್ಷಗಾನದ ಬೆಳವಣಿಗೆಗೆ ಶ್ರಮಿಸಬೇಕೆಂದು ಕರೆಯಿತ್ತರು. ಗೌರವ ಸಲಹೆಗಾರರುಗಳಾದ ಪ್ರೊ. ಪುರುಷೋತ್ತಮ ಬಿಳಿಮಲೆ ಹಾಗೂ ಶ್ರೀ ಸಖಾರಾಮ ಉಪ್ಪೂರು ಮತ್ತು ಪದಾಧಿಕಾರಿಗಳಾದ ಡಾ. ನಿರಂಜನ ನಾಯ್ಕ್, ಶ್ರೀ ಕೆ.ಎಸ್.ಜಿ. ಶೆಟ್ಟಿ, ಶ್ರೀ ಕಾರ್ತಿಕ್ ರೈ, ಶ್ರೀಮತಿ ಪೃಥ್ವಿ ಕಾರಿಂಜೆ, ಶ್ರೀ ಕೃಷ್ಣರಾಜ್ ಕೆ.ಎನ್. ಕಲಾವಿದರನ್ನು ಪುಷ್ಪಗುಚ್ಛ ಮತ್ತು ಸ್ಮರಣಿಕೆ ನೀಡಿ ಅಭಿನಂದಿಸಿದರು.

ಯಕ್ಷಧ್ರುವ ಪಟ್ಲ ಫೌಂಡೇಶನ್‌ನ ಮೂಲ ಧ್ಯೇಯೋದ್ದೇಶ ಮತ್ತು ಯಕ್ಷಗಾನ ಕಲಾರಂಗದ ಉದ್ದೇಶವೂ ಒಂದೇ ಆಗಿರುವುದನ್ನು ನಾವು ಇಲ್ಲಿ ಕಾಣಬಹುದಾಗಿದೆ. 'ಯಕ್ಷನಿಧಿ', 'ವಿದ್ಯಾಪೋಷಕ' ಮತ್ತು 'ಯಕ್ಷ ಶಿಕ್ಷಣ' ಎಂಬ ಹೆಸರಿನಲ್ಲಿ ಯಕ್ಷಗಾನ ಕಲೆಯ ನಿರಂತರ ಬೆಳವಣಿಗೆಗೆ ಸಹಾಯ ಮಾಡುತ್ತಾ ಅನೇಕ ಅತ್ಯುತ್ತಮ ಕಲಾವಿದರನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡಿದ ಹಿರಿಮೆ ಯಕ್ಷಗಾನ ಕಲಾರಂಗದ್ದು.

ಯಕ್ಷಗಾನವನ್ನು ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ಯಕ್ಷಗಾನ ಕಲಾವಿದರಿಗೆ ಪ್ರೋತ್ಸಾಹ ಧನ ಮತ್ತು ಲೈಫ್ ಇನ್ಸೂರೆನ್ಸ್ ಸೌಲಭ್ಯವನ್ನು ಕೂಡಾ ಒದಗಿಸುತ್ತಿದೆ. ಯಕ್ಷಗಾನ ತಾಳಮದ್ದಳೆ ಮತ್ತು ಯಕ್ಷಗಾನ ಬಯಲಾಟ ಕ್ಷೇತ್ರದಲ್ಲಿ ಹೊಸ ಹೊಸ ಕಲಾವಿದರನ್ನು ಸೃಷ್ಟಿಸುತ್ತಿದೆ. ಹೀಗೆ ಈ ಸಂಸ್ಥೆಯು ಯಕ್ಷಗಾನ ಕ್ಷೇತ್ರದಲ್ಲಿ ಗಣನೀಯ ಸೇವೆಯನ್ನು ಸಲ್ಲಿಸುತ್ತಾ ಬಂದಿದೆ. ಕಾರ್ಯಕ್ರಮದಲ್ಲಿ ಆರಂಭದಲ್ಲಿ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಶ್ರೀಮತಿ ಪೃಥ್ವಿ ಕಾರಿಂಜೆ ಎಲ್ಲರನ್ನೂ ಸ್ವಾಗತಿಸಿ ಹಾಗೂ ಕೊನೆಯಲ್ಲಿ ಧನ್ಯವಾದ ಸಮರ್ಪಿಸಿದರು. ಅ

***ಪೃಥ್ವಿ ಕಾರಿಂಜೆ***






# ಜಾಗತಿಕ ಸಾಂಪ್ರದಾಯಿಕ ಆಹಾರ ಮೇಳ 2017

ಜಾಗತಿಕ ಸಾಂಪ್ರದಾಯಿಕ ಆಹಾರ ಮೇಳವನ್ನು ಇದೇ ಫೆಬ್ರವರಿ 24, 25 ಮತ್ತು 26ರಂದು ಇಂದಿರಾಗಾಂಧಿ ನ್ಯಾಶನಲ್ ಸೆಂಟರ್ ಫಾರ್ ಆರ್ಟ್ಸನ ಆವರಣದಲ್ಲಿ ಆಯೋಜಿಸಲಾಗಿತ್ತು. ಈ ಆಹಾರ ಮೇಳವು 'ಕೌನ್ಸಿಲ್ ಫಾರ್ ಪ್ರಮೋಶನ್ ರಿಸರ್ಚ್ ಅಂಡ್ ಟ್ರೇಡ್ ಇನ್ ಟ್ರೆಡಿಶನಲ್ ಫುಡ್ಸ್' ಹಾಗೂ 'ಭಾರತೀಯ ಧರೋಹರ್' ಇವರುಗಳ ಜಂಟೀ ಆಯೋಜನೆಯಾಗಿತ್ತು.

ಕನ್ಸ್ಯೂಮರ್ ಇಂಡಿಯಾದ ಸದಸ್ಯೆಯಾಗಿರುವ ಶ್ರೀಮತಿ ಶಾಲನ್ ಮುರಗೋಡ ಅವರು ಹಲವಾರು ಕನ್ನಡಿಗರು ಈ ಮೇಳದಲ್ಲಿ ಭಾಗವಹಿಸುವಂತೆ ಹುರಿದುಂಬಿಸಿದ್ದರು. ದೇಶದ ಬೇರೆ ಬೇರೆ ಭಾಗಗಳಿಂದ ಬಂದ ಗೃಹಿಣಿಯರಿಗಾಗಿಯೇ ಫೆಬ್ರವರಿ 25ರಂದು ಸ್ಪರ್ಧೆಯೊಂದನ್ನು ಏರ್ಪಡಿಸಲಾಗಿತ್ತು. ಈ ಸ್ಪರ್ಧೆಯಲ್ಲಿ ಕನ್ನಡಿಗರಾದ ಶ್ರೀಮತಿ ಲಕ್ಷ್ಮೀ ಕಿಣಿ, ಶ್ರೀಮತಿ ಜಮುನಾ ಸಿ. ಮಠದ, ಶ್ರೀಮತಿ ಸುಮಿತಾ ಮುರಗೋಡ, ಶ್ರೀಮತಿ ಲಲಿತಾ ಗೋಸಾಲ್, ಶ್ರೀಮತಿ ಶೋಭಾ ಕುಲಕರ್ಣಿ ಹಾಗೂ ಕು. ನಂದಿನಿ ಮಠದ ಅವರು ಭಾಗವಹಿಸಿದ್ದರು.




ಈ ಸ್ಪರ್ಧೆಯಲ್ಲಿ ಮೊದಲ ಮೂರು ಪ್ರಶಸ್ತಿಗಳು ದೆಹಲಿ ಕರ್ನಾಟಕ ಸಂಘದ ಸದಸ್ಯೆಯರ ಕರ್ನಾಟಕದ ಸಾಂಪ್ರದಾಯಿಕ ಆಹಾರಕ್ಕೆ ಬಂದಿದೆ. ಸ್ಪರ್ಧೆಯಲ್ಲಿ ಮೊದಲ ಬಹುಮಾನ ಪ್ರಶಸ್ತಿ ಪತ್ರ ಮತ್ತು ರೂ. 5000 ಶ್ರೀಮತಿ ಲಕ್ಷ್ಮೀ ಕಿಣಿಯವರಿಗೆ ಬಂದಿದ್ದು, ಎರಡನೇಯ ಬಹುಮಾನ ಪ್ರಶಸ್ತಿ ಪತ್ರ ರೂ. 3000 ಶ್ರೀಮತಿ ಜಮುನಾ ಸಿ. ಮಠದ ಅವರಿಗೆ ಹಾಗೂ ಮೂರನೇಯ ಪ್ರಶಸ್ತಿ ಪತ್ರ ರೂ. 1500 ಬಹುಮಾನವನ್ನು ಶ್ರೀಮತಿ ಸುಮಿತಾ ಮುರಗೋಡ ಮತ್ತು ಶ್ರೀಮತಿ ಲಲಿತಾ ಗೋಸಾಲ್ ಹಂಚಿಕೊಂಡರು. ಇವರೆಲ್ಲರೂ 'ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್'ನ ಸದಸ್ಯೆಯರಾಗಿದ್ದಾರೆ. ಅ

***ಜಮುನಾ ಸಿ. ಮಠದ***

# 'ಸ್ನೇಹಾ'ದಿಂದ ವನವಿಹಾರ



ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಷನ್‌ನ ವಾರ್ಷಿಕ ಉದ್ಯಾನವನ ವಿಹಾರವನ್ನು ಇದೇ ಫೆಬ್ರವರಿ 10ರಂದು ದೆಹಲಿಯ ಹೌಸ್ ಕಾಸ್‌ನಲ್ಲಿರುವ ಡಿಯರ್ ಪಾರ್ಕ್‌ನಲ್ಲಿ ಏರ್ಪಡಿಸಲಾಗಿತ್ತು. ಮಹಿಳೆಯರೆಲ್ಲರೂ ಆಗಮಿಸಿ ಬಹಳ ಸ್ಫೂರ್ತಿಯಿಂದ ಎಲ್ಲಾ ಆಟೋಟ ಸ್ಪರ್ಧೆಗಳಲ್ಲಿ ಪಾಲ್ಗೊಂಡಿದ್ದರು. ವಿಜೇತರಿಗೆ ಬಹುಮಾನಗಳನ್ನು ವಿತರಿಸಲಾಯಿತು.

ಇದೇ ಸಂದರ್ಭದಲ್ಲಿ ಪಾರ್ಕ್ ಮೂಲೆಯಲ್ಲಿ ಹದಿಹರೆಯದ ಯುವತಿಯೊಬ್ಬಳು ಅಳುತ್ತಾ ಕುಳಿತಿದ್ದನ್ನು ಗಮನಿಸಿ ವಿಚಾರಿಸಿದಾಗ ಆಕೆ ಒಬ್ಬೊಬ್ಬರ ಹತ್ತಿರ ಒಂದೊಂದು ರೀತಿಯ ಸಂಶಯಾಸ್ಪದ ಹೇಳಿಕೆ ನೀಡಲಾರಂಭಿಸಿದಳು. ಮಹಿಳೆಯರೆಲ್ಲರೂ ಒಟ್ಟಾಗಿ ನಿರ್ಧರಿಸಿ ಪೋಲೀಸರಿಗೆ ಕರೆ ನೀಡಿದರು. 10ನಿಮಿಷಗಳಲ್ಲಿ ಪೋಲೀಸ್ ಸ್ಥಳಕ್ಕೆ ಆಗಮಿಸಿದರು. ಅವರೊಡನೆ ಆಕೆ ನಿಜ ಹೇಳಲು ನಿರಾಕರಿಸಿದಳು. ಪೋಲಿಸರೊಡನೆ ಮಹಿಳಾ ಸಿಬ್ಬಂದಿಯಿರದ ಕಾರಣ ನಮ್ಮ ಸದಸ್ಯೆಯರಾದ ಶ್ರೀಮತಿ ತಾರಾ ರಮೇಶ್, ಲಕ್ಷ್ಮೀ ಕಿಣಿ ಹಾಗೂ ಶ್ರೀಮತಿ ರೇಖಾ ನಾಯಕ್‌ರವರು ಆಕೆಯೊಡನೆ ಠಾಣೆಗೆ ಹೋಗಿ ಆಕೆಗೆ ಧೈರ್ಯ ತುಂಬಿ ಭರವಸೆ ನೀಡಿದ ನಂತರ ಆಕೆ ತಾನು ತನ್ನ ಸಹಪಾಠಿಯನ್ನು ಪ್ರೀತಿಸುತ್ತಿರುವ ವಿಷಯ ಮನೆಯಲ್ಲಿ ಪೋಷಕರಿಗೆ ತಿಳಿದು ಮನೆಯಲ್ಲಿ ಬಂಧಿಸಿದ್ದರೂ ಈ ಮುಂಜಾನೆ ಮನೆಯಿಂದ ಓಡಿ ಬಂದಿರುವುದಾಗಿ ಪೋಲೀಸರಿಗೆ ತಿಳಿಸಿದ ನಂತರ ಆಕೆಯ ಪೋಷಕರನ್ನು ಕರೆಯಿಸಿ ಮನೆಗೆ ಕಳುಹಿಸಲಾಯಿತು. ನಮ್ಮ ಈ ಮೂವರು ಸದಸ್ಯೆಯರ ಸಮಯೋಚಿತ ಕಾರ್ಯ ಹಾಗೂ ನೆರವು ನಿಜಕ್ಕೂ ಶ್ಲಾಘನೀಯ. ಅ

***ದೀನಾ ಜಾಯ್ಸ್***

## ಶ್ರದ್ಧಾಂಜಲಿ

ದೆಹಲಿ ಕರ್ನಾಟಕ ಸಂಘದ ಹಿರಿಯ ಆಜೀವ ಸದಸ್ಯರೂ ಹಾಗೂ ಜನಕಪುರಿ ಕನ್ನಡ ಕೂಟದಲ್ಲಿ ಅಧ್ಯಕ್ಷರೂ ಆಗಿ ಸೇವೆ ಸಲ್ಲಿಸಿದ್ದ ಶ್ರೀ ಬಿ.ಆರ್.ವಿಶ್ವನಾಥ್ ಅವರು ಜನವರಿ 12, 2017ರಂದು ನಿಧನ ಹೊಂದಿದ್ದರು.

ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದ, ನಿವೃತ್ತಿಯ ನಂತರ ಬೆಂಗಳೂರಿನಲ್ಲಿ ನೆಲೆಸಿದ್ದ ಶ್ರೀ ಟಿ.ಎಸ್. ಪ್ರಭುದೇವಯ್ಯನವರು ಜನವರಿ 14, 2017ರಂದು ನಿಧನರಾದರು. ಅವರು ದೆಹಲಿಯಲ್ಲಿ ಹಲವಾರು ಕನ್ನಡ ಸಂಘ ಸಂಸ್ಥೆಗಳಲ್ಲಿ ಕನ್ನಡಪರವಾದ ಸೇವೆ ಮಾಡಿದ್ದರು. ಅವರು ದೆಹಲಿ ಕನ್ನಡ ಶಾಲೆಯಲ್ಲಿ ಖಜಾಂಚಿಯಾಗಿ ಸೇವೆ ಸಲ್ಲಿಸಿದ್ದರಲ್ಲದೇ ಕನ್ನಡ ಫಿಲಂ ಸೊಸೈಟಿಯಲ್ಲಿ ಸಕ್ರಿಯ ಕಾರ್ಯಕರ್ತರಾಗಿದ್ದರು.

ಸಂಘದ ಹಿರಿಯ ಸದಸ್ಯ ಶ್ರೀ ಜಗನ್ನಾಥ ಶೆಟ್ಟಿ ಅವರು ಜನವರಿ 16, 2017ರಂದು ಬೆಂಗಳೂರಿನಲ್ಲಿ ನಿಧನರಾದರು.

# ಸ್ಥಳೀಯರ 'ಕೈರುಚಿ' ಆಹಾರ ಮೇಳ



ಶ್ರೀಮತಿ ದೀಪಾ ಎಸ್ (ಅರಸೀಕೆರೆ)



ಶ್ರೀಮತಿ ಆಶಾಲತಾ ಎಂ. (ಬೆಂಗಳೂರು)




ಶ್ರೀಮತಿ ಲಲಿತಾ ನಾರಾಯಣ ಸ್ವಾಮಿ (ಕೋಲಾರ



ಶ್ರೀಮತಿ ಜಮುನಾ ಸಿ. ಮಠದ (ಧಾರವಾಡ-ಹುಬ್ಬಳ್ಳಿ)



ಶ್ರೀಮತಿ ಛಾಯಾಬಾಲಚಂದ್ರ (ಸಿರ್ಸಿ)



ಶ್ರೀಮತಿ ಮಂಜುಳಾ ಬಿ.ಆರ್ (ಶಿವಮೊಗ್ಗ)



ಶ್ರೀಮತಿ ಪ್ರೇಮಾ ಗೌಡ (ಹಾಸನ)



ಶ್ರೀ ರಂಗನಾಥ್ (ತುಮಕೂರು)



ಶ್ರೀಮತಿ ರೂಪಶ್ರೀ (ಬೆಂಗಳೂರು)

# ಸ್ಥಳೀಯರ 'ಕೈರುಚಿ' ಆಹಾರ ಮೇಳ



ಶ್ರೀಮತಿ ವೀಣಾಕೋಟೆ ಮತ್ತು ಶ್ರೀಮತಿ ಸುಜಾತ ನಿಂಬಾಳ್



ಶ್ರೀಮತಿ ಮೈಥಿಲಿ ಅತ್ತಾವರ್ (ಅಯ್ಯಂಗಾರ್)



ಶ್ರೀಮತಿ ಸುಮಿತಾ ಮುರಗೋಡ (ಹಾಸನ)



ಶ್ರೀಮತಿ ಅಶ್ವಿನಿ ಶಿವಕುಮಾರ್ (ಶಿವಮೊಗ್ಗ)



ಶ್ರೀಮತಿ ಜಯಶ್ರೀ ಬಸವರಾಜು ಮತ್ತು ಶ್ರೀಮತಿ ಪ್ರೇರಣಾ ವೆಂಕಟೇಶ್



ಶ್ರೀ ಸುಧೀರ್ (ಕುಂದಾಪುರ)



ಶ್ರೀಮತಿ ಕವಿತಾ ಕಟ್ಟೀಮನಿ ಮತ್ತು ಶ್ರೀಮತಿ ಪ್ರಿಯದರ್ಶಿನಿ (ಬಿಜಾಪುರ)



ಶ್ರೀಮತಿ ಲಕ್ಷ್ಮೀ ಕಿಣಿ (ದಕ್ಷಿಣ ಕನ್ನಡ ಕೊಂಕಣಿ)



ಶ್ರೀ ಸುಧಾಕರ (ಮಂಗಳೂರು-ಪುತ್ತೂರು)

### ಬೆಳಕು-ಬದುಕು

ಮುಂಜಾನೆಯ ಹೊಂಬೆಳಕು
ಹೊತ್ತಾದಂತೆಲ್ಲಾ ಬಿಸಿಲೇರಿ ಸುಟ್ಟು
ಸಂಜೆಯ ವೇಳೆಗೆ ಮಾಗಿ ಹಣ್ಣಾಗಿ
ಮುಸ್ಸಂಜೆಯ ಸಮಯಕ್ಕೆ ಕತ್ತಲೆಯ
ತೆರೆ ಎಳಕೊಂಡು ಮರೆಯಾಗಿ
ಹೋದಂತೆ ಬಾಳಿನ ಬೆಳಕು ಕೂಡಾ
ಬಾಲ್ಯ, ಹುಡುಗಾಟ, ಯೌವ್ವನ
ಮುಪ್ಪು, ವೃದ್ಧಾಪ್ಯಗಳ ಅಲೆಗಳಲ್ಲಿ
ಸಿಕ್ಕಿ ತೇಲಿ ಸುಳಿದು ಹೋಗಿ
ಮತ್ತೆ ಮಣ್ಣಿನ ಗರ್ಭದಲ್ಲಿ ಸೇರಿ
ಬಿಡುವ ಒಂದು ಬೆಳಗು-ರಾತ್ರಿಯ
ಆಟ ಕಣ್ಣು ಮುಚ್ಚಾಲೆಯ
ಮಳೆನೀರಿನಲಿ ದೋಣಿ ಬಿಟ್ಟಂತೆ
ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ಹಾರಿ
ಹರಿದು ಹೋಗುವ ನಶ್ವರದಾಟ
ಬೆಳಕು-ಕತ್ತಲೆಗಳ ನಡುವೆ ಬೆತ್ತಲೆ
ಯಾಗಿಯೇ ಬಂದು ಬರಿಗೈಯಲ್ಲೇ
ಹೋಗುವ ಮೂರು ದಿನಗಳ
ಮಾಯಾ ಮಾಟ

*ಸಖಾರಾಮ ಉಪ್ಪೂರು*

### ಚಿಂತನೆ

ಮರುಕಳಿಸುವ ನೆನಪಿನ ಕೈವಾಡದಲಿ
ಸವಿನೆನಪು-ಕಹಿ ನೆನಪುಗಳ ಹೋರಾಟ
ಬದುಕುವ ರೀತಿ ನೀತಿಗೆ ಮಾರ್ಗವಾಗಲೆಂಬಾಸೆ
ಹುಟ್ಟು-ಸಾವುಗಳ ಚಕ್ರದ ತಂತಿ ಕೀಳದಂತೆ
ಬಾಳುವುದೇ ಮಾನವ ಧರ್ಮದಾ ಭರವಸೆ!
ಸಹನೆ, ಸಾಮರಸ್ಯ, ಸಂತುಷ್ಟಿ, ಸಂತೃಪ್ತಿ, ಸಂತೋಷಗಳೆಂಬ
ಪಂಚ ಮಂತ್ರಗಳ ಜಪಿಸೋ ಹೇ ಮಾನವ
ಅದು ನಿನ್ನ ಅರಿವಿಗಾಗಲಿ, ಪಥ್ಯದಾ ತತ್ವ!
ತಾತ್ವಿಕ ಕರ್ಮವು ಸಾರ್ಥಕವಾದೊಡೆ
ಬದುಕು ನಿರರ್ಥಕವಾಗದು, ಹಲುಮಾನವ
ಅರವತ್ತರ ಅರುಳು ಮರುಳಿನ ಕರುಳಿನ ಕರೆಗೆ
ಅರಳಿ, ಮರಳಲು ಸರಳವಾಗಿ ಬಾಳೋ ಹೇ ಮಾನವ!
ವಿಚಾರದ ಸಂಚಾರ ಸದಾಚಾರದೆಡೆಗಿರಲಿ
ಸಂಸ್ಮರಣ-ಸಂಸರಣಗಳ ಕೈವಾಡ
ಸಂಯೋಜಕ-ಸಕಾಲಿಕ-ಸಮರ್ಥನೀಯ ಸಂರಕ್ಷನೆಯಾಗಲಿ
ಇದೇ ಜೀವನದ ಸಮೀಕರಣ
ದಿಟ್ಟ ಹೆಜ್ಜೆಯಿಟ್ಟು ದಿವ್ಯತೆಯ ಹೆಮ್ಮೆಯೆಡೆ ಒಲಿಯೋಣ
ಸ್ವಪ್ರತಿಷ್ಠೆ-ಸ್ವಪ್ರಶಂಸೆ ಎರಡೂ ಸರ್ವತ್ರ ಕೀಳರಿಮೆಗೆ ಕಾರಣ!
ಉಚ್ಛ್ವಾಸ-ವಿಶ್ವಾಸಗಳ ನಡುವೆ ವಿಶ್ವಾಸದ ಕೈವಾಡದಲಿ
ಸಂತೋಷ-ಸಂತಾಪಗಳೊಡನೆ ಹೋರಾಡಿ
ಬದುಕುವ ಆಸೆ ಆಗಲಿ. . . .
"ಅದೇ ನನ್ನ ಧಾಮ" ಎಂಬುದ ಮರೆಯಬೇಡ!

*ಡಾ. ಅಹಲ್ಯಾಚಿಂತಾಮಣಿ*

# ಸುಪ್ರೀಂ ಕೋರ್ಟಿನ ನೂತನ ನ್ಯಾಯಮೂರ್ತಿಗಳು



ಶ್ರೀ ಎಸ್. ಅಬ್ದುಲ್ ನಜೀರ್



ಶ್ರೀ ಮೋಹನ್ ಶಾಂತನ ಗೌಡರ

ನ್ಯಾಯಮೂರ್ತಿಗಳಾದ ಎಸ್. ಅಬ್ದುಲ್ ನಜೀರ್ ಮತ್ತು ಮೋಹನ ಎಂ. ಶಾಂತನ ಗೌಡರ ಅವರು ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿಗಳಾಗಿ ಸೇವೆ ಸಲ್ಲಿಸಿದ್ದರು. ಇದೇ ಫೆಬ್ರವರಿ 17ರಂದು ನ್ಯಾಯಮೂರ್ತಿ ಎಸ್. ಅಬ್ದುಲ್ ನಜೀರ್ ಮತ್ತು ಕೇರಳ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿದ್ದ ಮೋಹನ ಎಂ. ಶಾಂತನ ಗೌಡರ ಅವರು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ.

ದೆಹಲಿ ಕರ್ನಾಟಕ ಸಂಘ ಇವರನ್ನು ಅಭಿನಂದಿಸುತ್ತದೆ. ಅ



**Statement of Ownership and other Particulars about**
**Delhi Karnataka Sangha's ABHIMATA**
**FORM-IV (See Rule 8)**

| | |
|---|---|
| **Place of Publication** | : Delhi Karnataka Sangha, New Delhi |
| **Periodicity of Pub** | : Monthly |
| **Printers Name** | : M/s Saujanya Printing Press, C-95, Okhla Industrial Area, Phase-I, New Delhi-110020 |
| **Publishers Name** | : C.M. Nagaraja |
| **Nationality** | : Indian |
| **Address** | : Delhi Karnataka Sangha Rao Tularam Marg, Sector-12, R.K. Puram, New Delhi - 22 |
| **Editor's Name** | : Balakrishna Naik D |
| **Nationality** | : Indian |
| **Address** | : As Above |
| **Name & Address** of Individual who own the News Paper | : Delhi Karnataka Sangha Rao Tularam Marg, Sector-12 R.K. Puram, New Delhi- 110022 |

I, C.M. Nagaraja, hereby declare that the particulars given above are true to the best of my knowledge and belief.

**09.03.2017** **Sd\-**
**New Delhi** **Publisher**

## ಓದುಗರ ಪತ್ರ




ಫೆಬ್ರುವರಿ ತಿಂಗಳ ಅಭಿಮತದ 20 ಪುಟಗಳಲ್ಲಿ ಎಷ್ಟೊಂದು ವೈವಿಧ್ಯಮಯವಾದ ಸುದ್ದಿಗಳು, ವ್ಯಕ್ತಿಚಿತ್ರಗಳು, ಕಿರು ಲೇಖನಗಳು ತುಂಬ ಖುಶಿಯಾಯಿತು. ಜನವರಿ ತಿಂಗಳಲ್ಲಿ ನಡೆದ ಘಟನೆಗಳನ್ನು ಒಂದೂ ಬಿಡದಂತೆ ದಾಖಲಿಸಿದ್ದೀರಿ. ಅದು ಗಣರಾಜ್ಯೋತ್ಸವದಲ್ಲಿಯ ಕರ್ನಾಟಕದ ಹಿರಿಮೆ ಇದ್ದೀತು, ಭಾಷೆಯ ಕುರಿತಾದ ರಾಷ್ಟ್ರೀಯ ವಿಚಾರ ಸಂಕಿರಣ, ಕಾರಂತ ಪ್ರಶಸ್ತಿ, ಇಂಗಳೇಶ್ವರರ ನಾಟಕ ಪ್ರದರ್ಶನ, ವಿಜಯಪುರದವರೇ ಆದ ಸುಧೀರ ಘಡ್ನೀಸರ ಹೊರನಾಡಿನಲ್ಲಿಯ ಸಾಧನೆ ಹೀಗೆ ಒಂದೇ ಎರಡೇ ಪ್ರತಿ ಪುಟವೂ ಓದಲು ಮುದ ನೀಡಿತು. ವರ್ಣರಂಜಿತ ಚಿತ್ರಗಳು ಇನ್ನಷ್ಟು ಮೆರಗು ನೀಡಿದೆ. ಅಭಿನಂದನೆಗಳು. ಅಭಿಮತವು ನಾಡಿನ ನಿಯತಕಾಲಿಕೆಗಳಿಗೆ ಮಾದರಿಯಂತಿದೆ. ಅ

***ಕೃಷ್ಣ ಕೊಲ್ಹಾರ ಕುಲಕರ್ಣಿ***

## ಅಭಿನಂದನೆ

# ನ್ಯಾ. ವಿಶ್ವನಾಥ ಶೆಟ್ಟಿ ಹೊಸ ಲೋಕಾಯುಕ್ತ



ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರೂ ಆಗಿರುವ ಶ್ರೀ ನ್ಯಾಯಮೂರ್ತಿ ಪೆರೋಡಿ ವಿಶ್ವನಾಥ್ ಶೆಟ್ಟಿ ಅವರು ಕರ್ನಾಟಕದ ನೂತನ ಲೋಕಾಯುಕ್ತರಾಗಿ ನೇಮಕಗೊಂಡಿದ್ದಾರೆ. ಮೂಲತಃ ಉಡುಪಿ ಜಿಲ್ಲೆಯವರಾದ ಇವರು ಉಪ್ಪೂರಿನ ಕೊಳಲಗಿರಿಯಲ್ಲಿ 1944ರಲ್ಲಿ ಜನಿಸಿದರು. ಉಡುಪಿ ಕಾನೂನು ಕಾಲೇಜಿನಲ್ಲಿ ಪದವಿ ಪಡೆದ ನಂತರ ಬೆಂಗಳೂರಿನ ಹೈಕೋರ್ಟ್‌ನಲ್ಲಿ ವಕೀಲ ವೃತ್ತಿ ಆರಂಭಿಸಿದರು. 1971 ರಿಂದ 1978ರವರೆಗೆ ಬೆಂಗಳೂರಿನ ಸರಕಾರಿ ಕಾನೂನು ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಕೂಡಾ ಸೇವೆ ಸಲ್ಲಿಸಿದ್ದರು. ದೆಹಲಿ ಕರ್ನಾಟಕ ಸಂಘ ಇವರನ್ನು ಅಭಿನಂದಿಸುತ್ತದೆ

Saujanya PRINTING PRESS

A HOUSE OF QUALITY OFFSET PRINTING

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ
ಸೌಜನ್ಯ ಪ್ರಿಂಟಿಂಗ್ ಪ್ರೆಸ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್
ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

Office : C-95, Okhla Industrial Area, Phase-I, New Delhi-110 020
T : +91-11-40520770, M : +91-9811104398, 9811604398
E : saujanyapp2010@gmail.com | hpgp2006@gmail.com

Delhi Karnataka Sangha Abhimatha Monthly,
Mar-2017, Vol. No.27, Issue No.6, Price Rs.1/- RNI Regn. No. 53405/91, DL-SW-1/4016/16-18
Printout Date : Mar 8th / 9th, Postal Date :10th / 11th, Total Pages-20
Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.

# ಸ್ಥಳೀಯರ 'ಕೈರುಚಿ' ಆಹಾರ ಮೇಳ



ಮಂಗಳೂರು




ಶ್ರೀಮತಿ ಶೋಭಾ ನಾಗರಾಜ (ಕೋಲಾರ)



ಉಡುಪಿ



ಶ್ರೀಮತಿ ಸಂಗೀತಾ ರಂಜಿತ್ (ಗುಲ್ಬರ್ಗಾ)




ಶ್ರೀಮತಿ ಪ್ರತಿಭಾ ಗೌಡ (ಶೃಂಗೇರಿ)



ಶ್ರೀಮತಿ ಸುನಂದ ದರ್ಗಾ ಮತ್ತು ಶ್ರೀಮತಿ ಶ್ರೀಲಕ್ಷ್ಮಿ



ಶ್ರೀಮತಿ ಪುಷ್ಪಲತಾ (ಚಿತ್ರದುರ್ಗ)



ಶ್ರೀಮತಿ ವಂದನಾ ಶೆಟ್ಟಿ (ಮಂಗಳೂರು)